ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಸೋಮವಾರ, ಜೂನ್ 19, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 36 RNI : 27369/75

janathavani@mac.com
www.janathavani.com
08192 254736  91642 99999

LONG TERM FOR NEET & IIT 2024
CLASSES COMMENCE FROM 3 JULY 2023
DR. THIMMAREDDY NEET ACADEMY
LIC COLONY, BIET VIDYANAGAR ROAD, DAVANGERE
9900055536, 9900077734 & 9964636810

BEST TUITION CLASSES
STATE, CBSE & ICSE
FROM LKG TO GRADE X
CLASSES COMMENCE FROM 3 JULY 2023
SMT SRIDEVI THIMMAREDDY INTERNATIONAL PUBLIC SCHOOL
DEVARABELAKRE ROAD, SHAMANUR, DAVANGERE
9900077729, 9448233498 & 9036019423

## ದಾವಣಗೆರೆ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನ

ದಾವಣಗೆರೆ, ಜು. 17- ಮುಂದಿನ ಐದು ವರ್ಷಗಳಲ್ಲಿ ದಾವಣಗೆರೆಯನ್ನು ಪ್ರಗತಿ ಪಥದತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ನಗರದ ಲಯನ್ಸ್ ಭವನದಲ್ಲಿ ಭಾನುವಾರ, ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನ ಸಮಿತಿ, ಲಯನ್ಸ್ ಕ್ಲಬ್ ಹಾಗೂ ಜಿಲ್ಲಾ ಯೋಗ ಒಕ್ಕೂಟದಿಂದ ಏರ್ಪಡಿಸಿದ್ದ ಯೋಗ ಸ್ಪರ್ಧೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.



ಈ ಹಿಂದೆ ನಾವು ಆಡಳಿತ ನಡೆಸಿದ ವೇಳೆಯಲ್ಲಿ ಸಾಕಷ್ಟು ಅನುದಾನ ತಂದು ನಗರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೆವು. ಸ್ಮಾರ್ಟ್ ಸಿಟಿ ಯೋಜನೆಯನ್ನೂ ನಾವೇ ತಂದಿದ್ದೆವು. ಆದರೆ, ಕಳೆದ 5 ವರ್ಷಗಳಲ್ಲಿ ಆಡಳಿತ ನಡೆಸಿದ ಬಿಜೆಪಿ ಅವಧಿಯಲ್ಲಿ ಯಾವುದೇ ಅಭಿವೃದ್ಧಿ ಕಾಣಲಿಲ್ಲ ಎಂದು ಹೇಳಿದರು.

ಐದು ವರ್ಷಗಳಲ್ಲಿ ಬಿಜೆಪಿಯವರು ಇಡೀ ನಗರ ದಿವಾಳಿ ಮಾಡಿದ್ದಾರೆ. ಶೇ. 40ರಿಂದ 50 ರಷ್ಟು ಕಮಿಷನ್ ಪಡೆದು ನಗರವನ್ನೇ ಹೊಲಸು ಮಾಡಿದ್ದಾರೆ. ಇವೆಲ್ಲವನ್ನೂ ಸ್ವಚ್ಛ ಮಾಡಲಿಕ್ಕಾಗಿಯೇ ಐದು ವರ್ಷ ಬೇಕು ಎಂದು ಹೇಳಿದರು.

1993ರಿಂದ ಅನ್ನಪೂರ್ಣೇಶ್ವರಿ ದೇವಸ್ಥಾನ ಸಮಿತಿಯವರು ಉತ್ತಮ ಸೇವಾ ಕಾರ್ಯ ಮಾಡಿಕೊಂಡು ಬಂದಿದ್ದಾರೆ. ದೇವಸ್ಥಾನಕ್ಕೆ ಜಾಗ ಕೊಡಿಸುವಂತೆ ಸಮಿತಿಯವರು ಮನವಿ ಮಾಡಿದ್ದು, ಇದಕ್ಕೆ ನನ್ನ ಕೈಲಾದ ಸಹಾಯ ಮಾಡುತ್ತೇನೆ. ಈ ಸಮಿತಿಯವರು ಇನ್ನಷ್ಟು ದೇಣಿಗೆ ಸಂಗ್ರಹಿಸಿ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸುವುದರ ಜತೆಗೆ ನೀಟಾಗಿ ಲೆಕ್ಕವನ್ನು ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಯೋಗ ಒಕ್ಕೂಟದ ಗೌರವಾಧ್ಯಕ್ಷ ಬಿ.ಸಿ. ಉಮಾಪತಿ (6ನೇ ಪುಟಕ್ಕೆ)

## ಸೋನಾ ಮಸೂರಿ ಅಕ್ಕಿ ಕೊಡಲಾಗದು

ಬೆಂಗಳೂರು, ಜೂ. 18 – ರಾಜ್ಯದಲ್ಲಿ ಅಕ್ಕಿ ಬೆಲೆ ಹೆಚ್ಚಾಗಿದೆ. ಹೀಗಾಗಿ ಇಲ್ಲಿ ಅಕ್ಕಿ ಖರೀದಿಸಿ ಅನ್ನ ಭಾಗ್ಯ ಯೋಜನೆಗೆ ಕೊಡಲು ಸಾಧ್ಯವಾಗದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಯಚೂರಿನಲ್ಲಿ ಸೋನಾ ಮಸೂರಿ ಅಕ್ಕಿ ಇದೆ. ಆದರೆ, ಅದರ ಬೆಲೆ ಕೆಜಿಗೆ 55 ರೂ. ಆಗುತ್ತದೆ. ಮತ್ತೊಂದೆಡೆ ಕೇಂದ್ರದ ಎಫ್.ಸಿ.ಐ.ನವರು ಪೂರೈಸುವ ಅಕ್ಕಿ ಬೆಲೆ ಸಾಗಣೆ ಸೇರಿ 36 ರೂ.ಗಳಷ್ಟು ಆಗುತ್ತದೆ ಎಂದು ಹೇಳಿದರು.

ಅನ್ನ ಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ನೀಡುವುದಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ತೀರ್ಮಾನಿಸಿದೆ. ಆದರೆ, ಈ ಅಕ್ಕಿ ಖರೀದಿಸಲು ಈಗ ತೊಡಕುಗಳು ಎದುರಾಗಿವೆ.

### ವಿದ್ಯುತ್ ಬೆಲೆ ಇಳಿಕೆ ಮಾಡುವುದಿಲ್ಲ: ಸಿಎಂ

ರಾಜ್ಯಗಳಿಗೆ ಅಕ್ಕಿ ಪೂರೈಸಲು ಸಾಧ್ಯವಾಗದು ಎಂದು ಕೇಂದ್ರ ಸರ್ಕಾರ ಹೇಳಿರುವುದು ರಾಜಕೀಯ ಪ್ರೇರಿತವಾಗಿದೆ. ಬಡವರ ಕಾರ್ಯಕ್ರಮದಲ್ಲಿ ರಾಜಕೀಯ ಮಾಡಬಾರದು ಎಂದು ಸಿದ್ದರಾಮಯ್ಯ ಕಿಡಿ ಕಾರಿದರು. (3ನೇ ಪುಟಕ್ಕೆ)

## ವಿದ್ಯುತ್ ಬೆಲೆ ಏರಿಕೆ ವಿರುದ್ಧ ಜೂ. 22ರಂದು ಬಂದ್‌ಗೆ ಕರೆ

ಬೆಂಗಳೂರು, ಜೂ. 18 – ವಿದ್ಯುತ್ ಬೆಲೆ ಏರಿಕೆಯ ವಿರುದ್ಧ ಬರುವ ಜೂ.22ರಂದು ಎಲ್ಲಾ ಕೈಗಾರಿಕೆಗಳು ಹಾಗೂ ವಾಣಿಜ್ಯೋದ್ಯಮಗಳನ್ನು ಬಂದ್ ಮಾಡಲು ರಾಜ್ಯ ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆ (ಕೆ.ಸಿ.ಸಿ.ಐ.) ಕರೆ ನೀಡಿದೆ.

ವಿದ್ಯುತ್ ಬೆಲೆ ಏರಿಕೆಗೆ ಸಂಬಂಧಿಸಿದಂತೆ ಕಳೆದ ಎಂಟು ದಿನಗಳಿಂದ ಸಂಸ್ಥೆಯು ಹಲವರನ್ನು ಸಂಪರ್ಕಿಸಲಾಗಿದೆ. ದರ ಏರಿಕೆಯ ಪರಿಣಾಮಗಳ ಗಂಭೀರತೆಯ ಮನವರಿಕೆ ಮಾಡಲು ಯತ್ನಿಸಲಾಗಿದೆ. ಆದರೆ, (3ನೇ ಪುಟಕ್ಕೆ)

NEET 2022 L.T. Marks 705
NEET 2020 Marks 703
NEET LONGTERM COACHING-2024
1st Batch Commences on 19-6-2023
Admissions are in Progress
Limited Hostel facility Available
Reserve your seat
Expected number of free Medical seats is more than 340 in NEET-2023 from single campus
Scan for Details
NEET - 2023
15 Students Above 650 Marks
59 Students Above 600 Marks
NEET MARKS 680/720 SAGAR H. P.
NEET MARKS 680/720 SRINIVAS B. M.
SIR M V GROUP OF INSTITUTIONS
DAVANGERE | SHIMOGA Ph : 9148684483 | BALLARI Ph : 8197764018
Davangere Ph. : 08192-261200, 9243312223, 8722141400

Srishyla Educational Trust (R), Bheemasamudra
GM INSTITUTE OF TECHNOLOGY
Approved by AICTE | Affliated to V.T.U. Belagavi | Recognized by Govt. of Karnataka
DAVANGERE-577 006.
ADMISSION OPEN FOR 2023-24
GOLD Rating from AICTE-CII
10 Research Centers
DXC Women Empowerment Cell
380 National & International Publications
8.4 Crores research grants
4 University Ranks with 5 Gold MEDALS
146 Teaching 52 Ph.Ds faculty with
813 Placement Offers 21-22 Batch
GM NextGen Innovation Center
78th RANK South Zone by THE WEEK rating
10 Centers of Excellences (CoEs)
15 Books 9 Products by Faculty Members
Bio Diesel extraction Plant
18 Patents 78 Awards by Faculty Members
SPORTS Prizes Won 1 International Level 26 National Level
National Digital Library Membership
91 MOUs with Reputed Companies
NATIONAL AWARD FOR "Most Promising and Leading Engineering & Technology College of the Year-2020"
UG PROGRAMMES
1. Computer Science & Engineering
2. Information Science & Engineering
3. Artificial Intelligence & Machine Learning
4. Electronics & Communication Engineering
5. Electrical & Electronics Engineering
6. Robotics & Automation
7. Mechanical Engineering
8. Civil Engineering
9. Biotechnology
GM INSTITUTE OF PHARMACEUTICAL SCIENCES AND RESEARCH
B.Pharm (Four Year Degree Course)
D.Pharm (Two Year Diploma Course)
B.Pharm (Lateral Entry for D.Pharm Students)
For Admission Call: 6364259994
www.gmit.ac.in
RECORD PLACEMENTS in the middle part of KARNATAKA during 2021-22 batch
604+ Current Final Year Students Placed in Top Companies
PG PROGRAMME MBA
INSTITUTION is providing 95% Placement
For More Details Contact:
63642 59993, 94481 33377

75 ನೇ ವರ್ಷದ ವಜ್ರ ಮಹೋತ್ಸವದ ಸಂಭ್ರಮದಲ್ಲಿರುವ
ಶ್ರೀ ಕಳಸಪ್ಪ ಗೌಡ್ರ ಚನ್ನಬಸಪ್ಪ
ಅವರಿಗೆ ಜನ್ಮ ದಿನದ ಶುಭಾಶಯಗಳು.
ಸರಳ ಸಜ್ಜನಿಕೆಯ ವ್ಯಕ್ತಿ, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಧರ್ಮದರ್ಶಿಗಳೂ,
ಹರಿಹರ ತಾ. ಗಂಗನರಸಿ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠದ
ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು,
ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ದಾವಣಗೆರೆ ಜಿಲ್ಲಾ ಶಾಖೆಯ ಅಧ್ಯಕ್ಷರು,
ಶ್ರೀ ಧರ್ಮಸ್ಥಳ ಜನಜಾಗೃತಿ ವೇದಿಕೆಯ ಜಿಲ್ಲಾ ಶಾಖೆಯ ಸದಸ್ಯರೂ,
ದಾವಣಗೆರೆ ಹಜರತ್ ಸಯ್ಯದ್ ಕಡಕ್ ಷಾವಲಿ ದರ್ಗಾದ ಪ್ರಧಾನ ಕಾರ್ಯದರ್ಶಿಗಳು,
ದಾವಣಗೆರೆ ಅಧಮ್ಯ ಕಲಾ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹಾಗೂ
ಇನ್ನೂ ಅನೇಕ ಸಂಘ-ಸಂಸ್ಥೆಗಳಲ್ಲಿ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ
ತಮ್ಮ ಸೇವೆಯನ್ನು ಮಾಡಿಕೊಂಡು ಬರುತ್ತಿರುವ ಹಾಗೂ
ಹಿರಿಯ ಕಾಂಗ್ರೆಸ್ ಮುಖಂಡರು, ರಾಜಕೀಯ ಕ್ಷೇತ್ರದಲ್ಲಿ
ಜಾತಿ, ಮತ ಭೇದವಿಲ್ಲದೆ ಸರ್ವ ಜನಾಂಗದವರೊಡನೆ
ಬೆರತುಕೊಂಡು ಬರುತ್ತಿರುವ ಮೂಲತಃ ರೈತಾಪಿ ಕುಟುಂಬದವರಾದ
74 ವಸಂತಗಳನ್ನು ಪೂರೈಸಿ 75 ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ
ಶ್ರೀ ಕಳಸಪ್ಪನವರ ಗೌಡ್ರು ಚನ್ನಬಸಪ್ಪನವರಿಗೆ
ಜನ್ಮ ದಿನದ ಹಾರ್ದಿಕ ಶುಭಾಶಯಗಳು.
75 years
♦ ಶ್ರೀ ದಿ. ವಿರೂಪಾಕ್ಷಪ್ಪ ಶ್ರೀಮತಿ ಗಂಗಮ್ಮ ಇವರ ಮಕ್ಕಳಾದ
♦ ಶ್ರೀ ಗುರುರಾಜ್ ಶ್ರೀಮತಿ ಅನುಸೂಯ ಮತ್ತು ಮಕ್ಕಳು
♦ ಶ್ರೀಮತಿ ಕೌಶಲ್ಯ ಶ್ರೀ ಡಾ. ಕೆ.ಕರಿಯಪ್ಪ, ಶ್ರೀ ರಾಮಕೃಷ್ಣ ನರ್ಸಿಂಗ್ ಹೋಂ,
♦ ಶ್ರೀಮತಿ ಗೀತ ಶ್ರೀ ಮಾಲತೇಶ್ ಮತ್ತು ಮಕ್ಕಳು, ಶ್ರೀಮತಿ ಡಾ. ಗಾಯತ್ರಿ ಶ್ರೀ ಡಾ.ಎಸ್.ಬಾನೆ ಮತ್ತು ಮಕ್ಕಳು
♦ ಶ್ರೀಮತಿ ಡಾ. ಸವಿತ ಡಾ. ಮಹೇಶ್, ಶ್ರೀಮತಿ ವಿಜಯಲಕ್ಷ್ಮಿ ಶ್ರೀ ಗಣೇಶ್ ಬಾಬು ಮತ್ತು ಮಕ್ಕಳು.
♦ ಶ್ರೀಮತಿ ರತ್ನಮ್ಮ ದಿ. ಶ್ರೀ ಡಿ. ಕರಿಯಪ್ಪ ಮತ್ತು ಮಕ್ಕಳಾದ : ಹೆಚ್.ಕೆ.ಸುರೇಶ್, ಹೆಚ್.ಕೆ.ರಮೇಶ್, ಹೆಚ್.ಕೆ. ಗಿರೀಶ್
♦ ಶ್ರೀಮತಿ ಕಮಲಮ್ಮ ಗೌಡ್ರ ಶ್ರೀ ಕಳಸಪ್ಪ ಮತ್ತು ಮಕ್ಕಳು ♦ ಶ್ರೀಮತಿ ಶಕುಂತಲ ಶ್ರೀ ದಿ. ಟಿ. ತಿಮ್ಮಣ್ಣ ಮತ್ತು ಮಕ್ಕಳು
♦ ಶ್ರೀಮತಿ ಸುಮಿತ್ರ ಶ್ರೀ ಶ್ರೀನಿವಾಸಮೂರ್ತಿ ಮತ್ತು ಮಕ್ಕಳು. ♦ ಶ್ರೀಮತಿ ದಿ. ಲೀಲಾವತಿ ಶ್ರೀ ಪಿ.ಷಣ್ಮುಖಪ್ಪ ಮತ್ತು ಮಕ್ಕಳು.
♦ ಶ್ರೀಮತಿ ಅನಿತ ಶ್ರೀ ಗೌಡ್ರ ಬಸವರಾಜ್ ಮತ್ತು ಮಕ್ಕಳು.
ಮಕ್ಕಳಾದ : ಶ್ರೀ ಜಿ.ಸಿ. ವಿಜಯಕುಮಾರ್, ಶ್ರೀಮತಿ ಜಿ.ಸಿ. ಮುಕ್ತಾದೇವಿ, ಶ್ರೀ ಶ್ರೀಕಾಂತ್ ಮತ್ತು ಮಗ ರಾಹುಲ್
♦ ಶ್ರೀಮತಿ ಜಯಶೀಲ ಶ್ರೀ ಜಿ.ಸಿ. ಸುರೇಶ್ ಮತ್ತು ಮಕ್ಕಳಾದ ಗೌತಮ್, ಗೌತಮಿ, ಸೋಮಶೇಖರ್ ಗೌಡ
♦ ಶ್ರೀಮತಿ ಜಿ.ಸಿ. ಸುಧಾ ಶ್ರೀ ಮೋಹನ್‌ಕುಮಾರ್ ಮತ್ತು ಲಿಖಿತ ಬೀಗರಾದ ಶ್ರೀಮತಿ ಲಲಿತಮ್ಮ ಶ್ರೀ ಚನ್ನವೀರಪ್ಪ ಮತ್ತು ಕುಟುಂಬದವರು, ಮಲೆಕುಂಬಳೂರು.
ರಾಹುಲ್ ಗೌತಮ್ ಗೌತಮಿ ಸೋಮಶೇಖರ್ ಗೌಡ ಲಿಖಿತ

# ಸತೀಶ್ ಜಾರಕಿಹೊಳಿ ಸಿಎಂ ಆಗಲು ಪಕ್ಷಾತೀತ ಬೆಂಬಲಕ್ಕೆ ಕರೆ



## ರಾಜನಹಳ್ಳಿ ಮಠದ ಕಾರ್ಯಕ್ರಮದಲ್ಲಿ ಸಚಿವ ಕೆ.ಎನ್. ರಾಜಣ್ಣ

ಮಲೇಬೆನ್ನೂರು, ಜೂ.18- ಶೋಷಿತ ಸಮುದಾಯಗಳ ನಾಯಕನಾಗಿ ಬೆಳೆದಿರುವ ವಾಲ್ಮೀಕಿ ನಾಯಕ ಸಮಾಜದ ಸತೀಶ್ ಜಾರಕಿಹೊಳಿ ಅವರಿಗೆ ಮುಖ್ಯಮಂತ್ರಿ ಆಗುವ ಅರ್ಹತೆ ಇದ್ದು, ಅವರಿಗೆ ನಮ್ಮ ಸಮಾಜದವರು ಪಕ್ಷಾತೀತವಾಗಿ ಬೆಂಬಲ ನೀಡಬೇಕೆಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಸಮಾಜದ ನೂತನ ಸಚಿವರು, ಶಾಸಕರಿಗೆ ಇಂದು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾನು ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ಆದರೆ ಸಕ್ರೀಯ ರಾಜಕಾರಣದಲ್ಲಿದ್ದು, ಸತೀಶ್ ಜಾರಕಿಹೊಳಿ ಅವರನ್ನು ಸಿಎಂ ಮಾಡಲು ಶ್ರಮಿಸುತ್ತೇನೆ. ಬದುಕಿರುವವರೆಗೂ ಶೋಷಿತರ, ಧ್ವನಿ ಇಲ್ಲದವರ ಪರವಾಗಿ ಹೋರಾಟ ಮಾಡುತ್ತೇನೆ. ಸಮಾಜದ ವಿಚಾರದಲ್ಲಿ ಪಕ್ಷ ಬೇಡ. ಸೋತವರು, ಗೆದ್ದವರು ಒಂದಾಗಿ ಹೋಗೋಣ ಎಂದ ರಾಜಣ್ಣ ಅವರು, ನಾವು ಗುರಿ ಮತ್ತು ಗುರುಗಳನ್ನು ಸರಿಯಾಗಿ ಇಟ್ಟುಕೊಂಡರೆ, ನಾವು ಅಂದುಕೊಂಡದ್ದನ್ನು ಸಾಧಿಸಬಹುದೆಂದು ಜನರನ್ನು ಹುರಿದುಂಬಿಸಿದರು.

ನಮ್ಮ ಸಮಾಜಕ್ಕೆ ಸಂವಿಧಾನ ಬದ್ಧ ಹಕ್ಕು ಕಲ್ಪಿಸುವುದಕ್ಕಾಗಿ ಶ್ರೀಗಳು 388 ಕಿ.ಮೀ. ಪಾದಯಾತ್ರೆ ಮತ್ತು 253 ದಿನ ಧರಣಿ ಸತ್ಯಾಗ್ರಹ ಮಾಡಿದ್ದರ ಫಲವಾಗಿ ಹಿಂದಿನ ಸರ್ಕಾರ ಮೀಸಲಾತಿ ಹೆಚ್ಚಿಸುವ ತೀರ್ಮಾನ ಮಾಡಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ. ಮೀಸಲಾತಿ ಹೆಚ್ಚಳ ಮಾಡಿರುವುದನ್ನು 9ನೇ ಶೆಡ್ಯೂಲ್‌ಗೆ ಸೇರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ. ರಾಜ್ಯದ ಬಿಜೆಪಿ ನಾಯಕರೂ ಈ ಬಗ್ಗೆ ಕೇಂದ್ರದ ಮೇಲೆ ಒತ್ತಡ ತರಬೇಕೆಂದು ವೇದಿಕೆಯಲ್ಲಿದ್ದ ಸಂಸದ ದೇವೇಂದ್ರಪ್ಪ ಅವರಿಗೆ ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಜನರು ನಮ್ಮ ಹಾಗೂ ನಮ್ಮ ಸರ್ಕಾರದ ಮೇಲೆ ಬಹಳ ನಿರೀಕ್ಷೆ ಇಟ್ಟಿದ್ದಾರೆಂಬ ಅರಿವು ನಮಗಿದೆ. ಜೊತೆಗೆ ಸಮಾಜಕ್ಕೆ ನಮ್ಮಿಂದ ಏನೇನು ಕೆಲಸಗಳು ಆಗೇಕೆಂಬ ಬಗ್ಗೆಯೂ ಮಾಹಿತಿ ಇದೆ. ಹಕ್ಕುಗಳಿಗಾಗಿ ನಾವು ಮೊದಲಿನಿಂದಲೂ ಹೋರಾಟ ಮಾಡುತ್ತಾ ಬಂದಿದ್ದೇವೆ. ಈಗ ನಮ್ಮ ಸರ್ಕಾರ ಬಂದಿರುವುದರಿಂದ ಹಂತ ಹಂತವಾಗಿ ಬೇಡಿಕೆಗಳನ್ನು ಈಡೇರಿಸುತ್ತೇವೆ ಎಂದರು.

ಶ್ರೀಗಳ ಹೋರಾಟಕ್ಕೆ ಹೆದರಿ ಎಸ್ಸಿ-ಎಸ್ಟಿಗಳಿಗೆ ಮೀಸಲಾತಿ ಪ್ರಮಾಣವನ್ನು ಬಿಜೆಪಿ ಸರ್ಕಾರ ಹೆಚ್ಚಳ ಮಾಡಿದ್ದಾರೆಯೇ ಹೊರತು ನಮ್ಮ ಸಮಾಜದ ಮೇಲಿನ ಪ್ರೀತಿಯಿಂದಲ್ಲ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ನಮ್ಮ ಸಮಾಜದ 20 ಜನ ವಾಟ್ಸಾಪ್ ಗಿರಾಕಿಗಳಿದ್ದು, ಸ್ವಾಮೀಜಿ ಅವರ ಜಾತಿ ಬಗ್ಗೆ ಮತ್ತು ಅವರ ಸಾಧನೆ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಇಂತಹ ಜನರ ಬಗ್ಗೆ ಸಮಾಜ ತಲೆಕೆಡಿಸಿಕೊಳ್ಳಬಾರದೆಂದು ಸತೀಶ್ ಜಾರಕಿಹೊಳಿ ಹೇಳಿದರು.

ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆ ಮತ್ತು ಪರಿಶಿಷ್ಠ ಪಂಗಡಗಳ ಇಲಾಖೆ ಸಚಿವ ಬಿ. ನಾಗೇಂದ್ರ ಮಾತನಾಡಿ, ರಾಜ್ಯದಲ್ಲಿ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪಿಸುವ ಚಿಂತನೆ ಇದೆ ಎಂದರು. ಎಸ್ಟಿಗೆ ಪ್ರತ್ಯೇಕ ಸಚಿವಾಲಯ ಹಿಂದಿನ ಸರ್ಕಾರದಲ್ಲಿ ಘೋಷಣೆಯಾಗಿದ್ದು, ಶೀಘ್ರವೇ ಕಾರ್ಯಾರಂಭ ಮಾಡುತ್ತೇವೆ ಎಂದು ಸಚಿವ ನಾಗೇಂದ್ರ ಹೇಳಿದರು.

ಬಳ್ಳಾರಿ ಸಂಸದ ಅರಸೀಕೆರೆ ದೇವೇಂದ್ರಪ್ಪ, ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ, ಹೆಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು, ಜಗಳೂರು ಶಾಸಕ ಬಿ. ದೇವೇಂದ್ರಪ್ಪ, ಕೂಡ್ಲಿಗಿ ಶಾಸಕ ಡಾ. ಎನ್.ಟಿ. ಶ್ರೀನಿವಾಸ್, ಮಾಯಕೊಂಡ ಶಾಸಕ ಕೆ. ಎಸ್. ಬಸವಂತಪ್ಪ ಮಾತನಾಡಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಸಂವಿಧಾನಬದ್ಧ ಹಕ್ಕುಗಳಿಗಾಗಿ ಸಮಾಜದ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಒಂದಾಗಬೇಕು. ಅಧಿಕಾರಕ್ಕೆ ಬಂದವರು ಸಮಾಜಕ್ಕೆ ಸಿಗಬೇಕಾದ ಸೌಲಭ್ಯಗಳನ್ನು ಕಲ್ಪಿಸಲು ಬದ್ಧರಾಗಿರಬೇಕೆಂದರು.

ಮೀಸಲಾತಿ ಹೆಚ್ಚಳವನ್ನು 9ನೇ ಶೆಡ್ಯೂಲ್‌ಗೆ ಸೇರಿಸಲು ಎಲ್ಲರೂ ಸೇರಿ ಕೇಂದ್ರದ ಮೇಲೆ ಒತ್ತಡ ಹಾಕಬೇಕು. ನಕಲಿ ಜಾತಿ ಪ್ರಮಾಣ ಪತ್ರ ತಡೆಗೆ ಮುಂದಾಗಬೇಕಾಗಿದ್ದ ಸರ್ಕಾರವೇ ಪ್ರೋತ್ಸಾಹ ನೀಡಿದ್ದು, ತುಂಬಾ ಬೇಸರದ ಸಂಗತಿಯಾಗಿದೆ. ಈ ವಿಚಾರದಲ್ಲಿ ಹಿಂದಿನ ಸಿಎಂ ಮಾಡಿದ್ದ ಆದೇಶವನ್ನು ಈ ಸರ್ಕಾರ ರದ್ದು ಮಾಡಬೇಕೆಂದು ಸ್ವಾಮೀಜಿ ಒತ್ತಾಯಿಸಿದರು.

ನಿವೃತ್ತ ಜಿಲ್ಲಾಧಿಕಾರಿ ಬಿ. ಶಿವಪ್ಪ ಅವರು ಸಮುದಾಯದ ಮುಂದಿನ ಸವಾಲುಗಳು ಹಾಗೂ ಪರಿಹಾರೋಪಾಯಗಳ ಕುರಿತು ಮಾತನಾಡಿದರು. ನಿವೃತ್ತ ಅಧಿಕಾರಿ ಕೆ.ಎಸ್. ಮೃತ್ಯುಂಜಯಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದ ಬೇಡಿಕೆಗಳನ್ನು ಸಭೆಯ ಗಮನಕ್ಕೆ ತಂದರು.

ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ, ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಧರ್ಮದರ್ಶಿಗಳಾದ ಶ್ರೀಮತಿ ಶಾಂತಲಾ ರಾಜಣ್ಣ, ಶಾಂತ ಸುರಪುರ, ಕೆ.ಬಿ. ಮಂಜುನಾಥ್, ಮುಖಂಡರಾದ ಟಿ. ಈಶ್ವರ್, ಜಿ.ಟಿ. ಚಂದ್ರಶೇಖರಪ್ಪ, ಭಕ್ತ ರಾಮೇಗೌಡ, ಡಾ. ಎ.ಬಿ. ರಾಮಚಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಶ್ರೀಮತಿ ಸವಿತಾ ಗಣೇಶ್, ಕುಕ್ಕುವಾಡ ಮಂಜುನಾಥ್, ಸಣ್ಣತಮ್ಮಪ್ಪ ಬಾರ್ಕಿ, ಹರಪನಹಳ್ಳಿ ಹುಚ್ಚೆಂಗೆಪ್ಪ, ಜಿಗಳಿಯ ಜಿ. ಆನಂದಪ್ಪ, ಕೆ.ಆರ್. ರಂಗಪ್ಪ, ಜಿ.ಆರ್. ರಂಗಪ್ಪ, ಜಿ.ಆರ್. ನಾಗರಾಜ್, ಪತ್ರಕರ್ತ ಪ್ರಕಾಶ್, ಕೊಕ್ಕನೂರು ಸೋಮಶೇಖರ್, ತಣಿಗೆರೆಯ ಸನ್ನಿ, ಶ್ರೀಮತಿ ವಿಜಯಶ್ರೀ, ಗೌರಮ್ಮ, ಪಾರ್ವತಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಮುಖಂಡ ಹೊದಿಗೆರೆ ರಮೇಶ್ ಸ್ವಾಗತಿಸಿದರು. ಮಠದ ಧರ್ಮದರ್ಶಿ ಹರ್ತಿಕೋಟೆ ವೀರೇಂದ್ರಸಿಂಹ ನಿರೂಪಿಸಿದರು. ಕೆಪಿಸಿಸಿ ಎಸ್ಟಿ ವಿಭಾಗದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ವಂದಿಸಿದರು.

### ನಟ ಸುದೀಪ್ ಪ್ರಚಾರಕ್ಕೆ ರಾಜಣ್ಣ ಖಂಡನೆ

ಇತ್ತೀಚೆಗೆ ನಡೆದ ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಚಿತ್ರನಟ ಸುದೀಪ್ ಅವರು, ಒಂದು ಪಕ್ಷದ ಪರವಾಗಿ ಪ್ರಚಾರ ಮಾಡಿರುವುದು ಸರಿಯಲ್ಲ. ಮೀಸಲಾತಿ ಕ್ಷೇತ್ರಗಳಿಗೂ ಹೋಗಿ ಒಬ್ಬರ ಪರವಾಗಿ ಪ್ರಚಾರ ಮಾಡಿದ್ದನ್ನೂ ನಾವು ಖಂಡಿಸುತ್ತೇವೆ ಎಂದು ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಸುದೀಪ್ ಒಬ್ಬ ಪ್ರತಿಭಾವಂತ ನಟರಾಗಿದ್ದು, ಅವರಿಗೆ ಎಲ್ಲಾ ಪಕ್ಷಗಳಲ್ಲೂ ಅಭಿಮಾನಿಗಳಿದ್ದಾರೆ. ಈ ಅರಿವು ಇಲ್ಲದೇ ಅವರು ಒಂದು ಪಕ್ಷಕ್ಕೆ ಸೀಮಿತವಾಗಿದ್ದು ಬೇಸರ ತಂದಿದೆ. ಆಗಿರುವ ತಪ್ಪನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಸುದೀಪ್ ಇನ್ನೂ ಉನ್ನತ ಸ್ಥಾನಕ್ಕೆ ಬೆಳೆಯಲಿ ಎಂದು ಆಶಿಸಿದರು.

# ಹರಿಹರ : ಉಕ್ಕಡಗಾತ್ರಿ ಬಸ್‌ಗಾಗಿ ಪರದಾಟ ತಡರಾತ್ರಿಯವರೆಗೆ ಕಾದ ಭಕ್ತರು



ಹರಿಹರ, ಜೂ.18 - ಅಮವಾಸ್ಯೆ ಪ್ರಯುಕ್ತ ಹರಿಹರ ನಗರದಿಂದ ಉಕ್ಕಡಗಾತ್ರಿ ದೇವಸ್ಥಾನಕ್ಕೆ ತೆರಳುವ ಭಕ್ತರು ಬಸ್‌ಗಳು ಸಿಗದೇ ತಡರಾತ್ರಿಯವರೆಗೆ ಕಾದು ಕುಳಿತ ಘಟನೆ ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ನಡೆದಿದೆ. ಸುಮಾರು ಮುನ್ನೂರಕ್ಕೂ ಹೆಚ್ಚು ಪ್ರಯಾಣಿಕರು ಬಸ್ ನಿಲ್ದಾಣದ ಆವರಣದಲ್ಲಿ ಕಾದು ಕುಳಿತಿದ್ದರು. ಇವರಿಗೆ ಸರಿಯಾದ ರೀತಿಯಲ್ಲಿ ಬಸ್ ವ್ಯವಸ್ಥೆ ಮಾಡುವುದಕ್ಕೆ ಅಧಿಕಾರಿಗಳು ಸ್ಥಳದಲ್ಲಿ ಹಾಜರಿಲ್ಲದೇ ಇರುವುದು ಕಂಡುಬಂದಿತು. ಈ ಬಗ್ಗೆ ಕೋಪಗೊಂಡ ಪ್ರಯಾಣಿಕರು ಇಲಾಖೆಯ ಅಧಿಕಾರಿಗಳ ಮೇಲೆ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಡಿಪೋ ಮ್ಯಾನೇಜರ್ ಸಂದೀಪ್, ಪ್ರತಿ ತಿಂಗಳು ಅಮಾವಾಸ್ಯೆ ಪ್ರಯುಕ್ತ ಉಕ್ಕಡಗಾತ್ರಿ ದೇವಸ್ಥಾನಕ್ಕೆ 25 ಬಸ್ ವ್ಯವಸ್ಥೆ ಮಾಡಲಾಗುತ್ತದೆ. ಆದರೆ, ಈಗಾಗಲೇ ಹೋಗಿರುವ ಬಸ್‌ಗಳು ಬರಬೇಕು. ನಂತರ ಬಸ್ ವ್ಯವಸ್ಥೆ ಮಾಡಲಾಗುತ್ತದೆ. ಆದರೆ ಇಂತಿಷ್ಟು ಸಮಯಕ್ಕೆ ಬಿಡಲಾಗುತ್ತದೆ ಎಂದು ನಿಖರವಾಗಿ ಹೇಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು.

# 6 ತಿಂಗಳಾದರೂ ಅತಿಥಿ ಉಪನ್ಯಾಸಕರಿಗಿಲ್ಲ ಸಂಬಳ..!

## ಸರ್ಕಾರಿ ಪಿಯು ಅ.ಉ.ಸಂಘಟನೆ ನಿಯೋಗದಿಂದ ಉಪ ನಿರ್ದೇಶಕರಿಗೆ ಮನವಿ



ದಾವಣಗೆರೆ, ಜೂ.18- ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ನಿಯೋಗವು ಇಂದು ಪಿಯು ಕಾಲೇಜುಗಳ ಉಪನಿರ್ದೇಶಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಅತಿಥಿ ಉಪನ್ಯಾಸಕರಿಗೆ ಕಳೆದ ಜನವರಿಯಿಂದ ಮಾರ್ಚ್‌ವರೆಗೆ ಮೂರು ತಿಂಗಳ ವೇತನವನ್ನು ಆರು ತಿಂಗಳಾದರೂ ನೀಡಿರುವುದಿಲ್ಲ. ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೇ ನೇಮಕಾತಿಯಲ್ಲಿ ಹೆಚ್ಚು ಸೇವಾ ಅನುಭವ ಇರುವಂತ ಉಪನ್ಯಾಸಕರಿಗೆ ಪ್ರಾಮುಖ್ಯತೆ ನೀಡಿ, ನಂತರ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಬೇಕೆಂದು ಒತ್ತಾಯಿಸಲಾಯಿತು.

ನಮ್ಮೆಲ್ಲರ ಮನವಿಗೆ ಶಿಕ್ಷಣ ಸಚಿವರೂ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಸಂಘಟನೆಯ ಜಂಟಿ ಕಾರ್ಯದರ್ಶಿ ಎಸ್.ಜಿ.ನಾಗರತ್ನ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಪ್ರೇಮಲತಾ, ನಾಗರಾಜು, ಮೈಲಾರಪ್ಪ, ಇರ್ಫಾನ್, ನಾಗಜ್ಯೋತಿ ಮತ್ತಿತರರು ಇದ್ದರು.

# ಸೀರಂ ಸಂಸ್ಥೆಯ ಚುಚ್ಚುಮದ್ದಿಗೆ ಪರೀಕ್ಷೆಯಿಲ್ಲದೇ ಅನುಮತಿ

ನವದೆಹಲಿ, ಜೂ. 18 – ಕ್ಷಯ ರೋಗದ ಪತ್ತೆಗಾಗಿ ನಡೆಸಲಾಗುವ ಸಿವೈ-ಟಿ.ಬಿ. ಚುಚ್ಚುಮದ್ದಿನ ಪರೀಕ್ಷೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಸರ್ಕಾರಿ ಸ್ವಾಮ್ಯದ ಕೇಂದ್ರಗಳಲ್ಲಿ ಪರೀಕ್ಷಾ ಸೌಲಭ್ಯವಿಲ್ಲದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಸೀರಂ ಇನ್‌ಸ್ಟಿಟ್ಯೂಟ್ ಈ ಚುಚ್ಚುಮದ್ದುಗಳನ್ನು ಉತ್ಪಾದಿಸಿದೆ. ಸಂಸ್ಥೆಯ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರು ಕಳೆದ ಏಪ್ರಿಲ್ 24ರಂದು ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದು ವಿನಾಯಿತಿ ಕೇಳಿದ್ದರು. ಕಳೆದ ಮೇ 9, 2022ರಂದು ಔಷಧ ನಿಯಂತ್ರಕ ಡಿ.ಸಿ.ಜಿ.ಐ. ಈ ಚುಚ್ಚುಮದ್ದಿಗೆ ಒಪ್ಪಿಗೆ ನೀಡಿತ್ತು. ಆದರೆ, ಇದನ್ನು ಮಾರುಕಟ್ಟೆಗೆ ಬಿಡಲು ಸರ್ಕಾರಿ ಸಂಸ್ಥೆಗಳಿಂದ ಪರೀಕ್ಷೆ ನಡೆಯಬೇಕಿತ್ತು. ಸರ್ಕಾರಿ ಸಂಸ್ಥೆಗಳ ಬಳಿ ಪರೀಕ್ಷಾ ಸೌಲಭ್ಯ ಇಲ್ಲದ ಕಾರಣ, ವರ್ಷ ಕಳೆದರೂ ಸಿವೈ-ಟಿ.ಬಿ. ಮಾರುಕಟ್ಟೆಗೆ ಬಿಡುಗಡೆ ಆಗಿರಲಿಲ್ಲ. ನಂತರ ಸಿಂಗ್ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. 18 ವರ್ಷಕ್ಕೂ ಹೆಚ್ಚಿನ ವಯೋಮಾನದವರಲ್ಲಿ ಕ್ಷಯರೋಗ ಪತ್ತೆಗಾಗಿ ಈ ಚುಚ್ಚುಮದ್ದು ಬಳಸಲಾಗುತ್ತದೆ. ಇದರ ಆಂತರಿಕ ಪರೀಕ್ಷೆಗೆ ಅವಕಾಶ ನೀಡಬೇಕೆಂದು ಸಿಂಗ್ ಕೇಳಿದ್ದರು.

# ಸಹಕಾರ ಬ್ಯಾಂಕ್ : ತರಬೇತಿಗೆ ಅರ್ಜಿ

ದಾವಣಗೆರೆ, ಜೂ. 18- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಜುಲೈ ಮಾಹೆಯಲ್ಲಿ ಪ್ರಾರಂಭ ಮಾಡಲಿರುವ 6 ತಿಂಗಳ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಗಾಗಿ ಸಹಕಾರ ಸಂಘ, ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿ ಹೊಂದದೇ ಇರುವ ಸಿಬ್ಬಂದಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯದ ಬೆಂಗಳೂರು, ಮೈಸೂರು, ಮಡಿಕೇರಿ, ಮೂಡಬಿದ್ರೆ, ಶಿವಮೊಗ್ಗ, ಧಾರವಾಡ, ಬೆಳಗಾವಿ ಹಾಗೂ ಕಲಬುರಗಿ ಸ್ಥಳಗಳಲ್ಲಿ ತರಬೇತಿ ಸಂಸ್ಥೆಗಳನ್ನು ನಡೆಸಲಾಗುತ್ತದೆ. ಇದೇ ದಿನಾಂಕ 21 ರೊಳಗಾಗಿ ಅರ್ಜಿ ಸಲ್ಲಿಸಲು ಜಿಲ್ಲಾ ಸಹಕಾರ ಒಕ್ಕೂಟ ನಿಗಮದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಿಳಿಸಿದ್ದಾರೆ.

# ಶ್ರೀ ಸ್ವಾಮಿ ಪುರುಷೋತ್ತಮಾನಂದಜೀ ಕನ್ನಡ ಸಾಹಿತ್ಯಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ

## ರಾಣೇಬೆನ್ನೂರಿನ ಸತ್ಸಂಗ ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರ ಕೇಲಗಾರ



ರಾಣೇಬೆನ್ನೂರು, ಜೂ.18- ಶ್ರೀ ಸ್ವಾಮಿ ಪುರುಷೋತ್ತಮಾನಂದಜೀ ಅವರು, ವಿದ್ಯಾರ್ಥಿಗೊಂದು ಪತ್ರ, ಅಧ್ಯಾತ್ಮದಲ್ಲಿ ಏಕಾಗ್ರತೆ, ಧೀರತೆಯ ದುಂದುಬಿ, ಕಬೀರ ಬೀರಿದ ಬೆಳಕು, ತಪಸ್ಸು ಯಶಸ್ಸು ಮುಂತಾದ ಕೃತಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ ಎಂದು ಡಾ. ಚಂದ್ರಶೇಖರ ಕೇಲಗಾರ ಹೇಳಿದರು.

ಅವರು ಇಲ್ಲಿನ ರಾಜರಾಜೇಶ್ವರಿ ನಗರದ ಶ್ರೀ ಮಾತಾ ಸತ್ಸಂಗ ಕೇಂದ್ರದಲ್ಲಿ ನಡೆದ ಸ್ವಾಮಿ ಪುರುಷೋತ್ತಮಾನಂದಜೀ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಿದ್ದರು.

ಶ್ರೀಗಳು ರಚಿಸಿದ ಸಾಹಿತ್ಯ ಯುವಶಕ್ತಿಗೆ ಬಹಳಷ್ಟು ಉಪಯುಕ್ತ ವಾದುದಾಗಿದೆ. ಪಾಲಕರು ತಮ್ಮ ಮಕ್ಕಳಿಗೆ ಅವರ ಸಾಹಿತ್ಯವನ್ನು ಓದಲು ಪ್ರೇರೇಪಿಸಬೇಕು. ರಾಜ್ಯಾದ್ಯಂತ ಅನೇಕ ಸತ್ಸಂಗ ಕೇಂದ್ರ ಹಾಗೂ ರಾಮಕೃಷ್ಣಾಶ್ರಮ ಶಾಖೆಗಳ ಹುಟ್ಟಿಗೆ ಶ್ರೀ ಪುರುಷೋತ್ತಮಾನಂದ ಶ್ರೀಗಳು ಕಾರಣರಾಗಿದ್ದಾರೆ ಎಂದು ಡಾ. ಕೇಲಗಾರ ಹೇಳಿದರು.

ಪುರುಷೋತ್ತಮಾನಂದ ಶ್ರೀಗಳು ಕೇವಲ ಅಧ್ಯಾತ್ಮಿಕ ಬೋಧನೆಗೆ ಸೀಮಿತರಾಗಿರಲಿಲ್ಲ. ಸಾಹಿತ್ಯ ಅರಿಯದವರಿಗೆ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿಸಿದರು. ಎಲ್ಲ ಜಾತಿ, ಧರ್ಮದ ಜನರು ಅವರ ಉಪನ್ಯಾಸಕ್ಕೆ ಮಾರುಹೋಗಿದ್ದರು. ಅಂತಹ ಅದ್ಭುತ ಶಕ್ತಿ ಅವರಿಗಿತ್ತು ಎಂದು ರಾಮಕೃಷ್ಣಾಶ್ರಮದ ಪ್ರಕಾಶಾನಂದ ಮಹಾರಾಜರು ನುಡಿದರು.

ಭಗವನ್ನಾಮ ಸಂಕೀರ್ತನೆ, ಮಂಗಳಾರತಿ ಕಾರ್ಯಕ್ರಮಗಳು. ಜಿ.ಎಸ್.ಮುಂಡರಗಿ, ಎಸ್.ಟಿ. ತಾವರಗೇರಿ, ಕಲ್ಲೇಶ, ಪಾಂಡುರಂಗ, ಪ್ರಶಾಂತ, ಸಾವಂತ್ರಮ್ಮ, ಸುವರ್ಣಮ್ಮ, ಕಸ್ತೂರಮ್ಮ, ರಶ್ಮಿ ಇದ್ದರು. ಸ್ವಾಮಿ ಆತ್ಮದೀಪಾನಂದ ಶ್ರೀಗಳು ಉಪಸ್ಥಿತರಿದ್ದರು.

# ಹರಿಹರ : ಜನತಾಬಜಾರ್ ಖಾಲಿ ಜಾಗ ಬಳಕೆಗೆ ಶಾಸಕ ಹರೀಶ್ ಸೂಚನೆ



ಹರಿಹರ, ಜು. 18 - ನಗರದ ಸಾರ್ವಜನಿಕ ಗ್ರಂಥಾಲಯ ಆವರಣದ ಪಕ್ಕದಲ್ಲಿನ ಜನತಾ ಬಜಾರ್‌ಗೆ ಸೇರಿದ ನಿವೇಶನ ಕಸದ ತಿಪ್ಪೆಯಾಗಿರುವ ಬಗ್ಗೆ ಆಕ್ಷೇಪಿಸಿರುವ ಶಾಸಕ ಬಿ.ಪಿ. ಹರೀಶ್, ಈ ಜಾಗವನ್ನು ಬಳಸಿಕೊಳ್ಳುವಂತೆ ಜನತಾ ಬಜಾರ್‌ಗೆ ಸೂಚಿಸಿದ್ದಾರೆ. ನಿವೇಶನದಲ್ಲಿ ಕಸದ ರಾಶಿ ಇರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಹರೀಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಬಗ್ಗೆ ಜನತಾ ಬಜಾರ್ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿದರು. ಈ ಜಾಗದಲ್ಲಿ ಕಟ್ಟಡ ನಿರ್ಮಿಸುವ ಬಗ್ಗೆ ಚರ್ಚಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಹನುಮಂತಪ್ಪ, ಆರೋಗ್ಯ ಇಲಾಖೆ ರವಿಪ್ರಕಾಶ್, ಸಂತೋಷ್, ಮುಖಂಡರಾದ ಸುನಿಲ್ ರಾವ್ ಇತರರು ಹಾಜರಿದ್ದರು.

### ರಾಣೇಬೆನ್ನೂರಿನಲ್ಲಿ ಇಂದು ವರ್ತಕರ ಸಭೆ

ವಿದ್ಯುತ್ ದರ ಹೆಚ್ಚಿಗೆ ಮಾಡಿರುವ ಆದೇಶ ಕುರಿತು ಚರ್ಚಿಸಲು, ಇಂದು ಮಧ್ಯಾಹ್ನ 4 ಗಂಟೆಗೆ ಸ್ಟೇಷನ್ ರಸ್ತೆಯ ವರ್ತಕರ ಸಂಘದಲ್ಲಿ ಸಭೆ ಕರೆಯಲಾಗಿದೆ ಎಂದು ವರ್ತಕರ ಸಂಘದ ಅಧ್ಯಕ್ಷ ಗದಿಗೆಪ್ಪಗೌಡ ಹೊಟ್ಟಿಗೌಡ್ರ ತಿಳಿಸಿದ್ದಾರೆ.

# ಅಂತರರಾಷ್ಟ್ರೀಯ ಪರಿಕಲ್ಪನೆಯ ಎಂ.ಐ ವಿಂಗ್ಸ್ ಪ್ರಿ ಸ್ಕೂಲ್ ಆರಂಭ



ದಾವಣಗೆರೆ, ಜೂ. 18 - ಅಮೇರಿಕಾದ ಹೆಸರಾಂತ ವಿಜ್ಞಾನಿ ಡಾ. ಹಾರ್ವರ್ಡ್ ಗಾರ್ಡ್ನರ್ ಅವರ ಮಲ್ಟಿಪಲ್ ಇಂಟಲಿಜೆನ್ಸ್- ಮಕ್ಕಳಲ್ಲಿರುವ 8 ಬುದ್ಧಿವಂತಿಕೆಗಳನ್ನು ಉತ್ತಮಗೊಳಿಸುವ ಹಾಗೂ ಮಕ್ಕಳ ಕಲಿಕೆಯನ್ನು ಪರಿಣಾಮಕಾರಿಗೊಳಿಸುವ ಪರಿಕಲ್ಪನೆಯ ಎಂ.ಐ ವಿಂಗ್ಸ್ ಪ್ರಿ ಸ್ಕೂಲ್ ನ ಶಾಖೆ ನಗರದಲ್ಲಿ ಆರಂಭವಾಗಿದೆ.

ಮಲ್ಟಿಪಲ್ ಇಂಟಲಿಜೆನ್ಸ್ ಆಧಾರಿತ ಪ್ರಿ ಸ್ಕೂಲ್ ಇದಾಗಿದ್ದು, ವಿಭಿನ್ನವಾದ ರೀತಿಯಲ್ಲಿ ಮಕ್ಕಳಿಗೆ ಶಿಕ್ಷಣ ಹಾಗೂ ಅವರ ಮುಂದಿನ ಜೀವನಕ್ಕೆ ಭದ್ರ ತಳಹದಿ ಹಾಕಲಿದೆ. ಮಕ್ಕಳಲ್ಲಿ ಮೊದಲ ಆರು ವರ್ಷದವರೆಗೂ ಮೆದುಳಿನ ಬೆಳವಣಿಗೆ ವೇಗವಾದ ಗತಿಯಲ್ಲಿ ಇರುತ್ತದೆ. ಮೆದುಳಿನ ಶೇ. 80 ರಷ್ಟು ಬೆಳವಣಿಗೆ ಮೊದಲ ಆರು ವರ್ಷಗಳು ಆಗುತ್ತದೆ ಎಂಬುದನ್ನು ವಿಜ್ಞಾನಿಗಳು ಸಾಬೀತುಪಡಿಸಿದ್ದಾರೆ. ಆದ್ದರಿಂದ ಮಕ್ಕಳ ಮೊದಲ ಆರು ವರ್ಷಗಳು ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಣ ಬಹಳ ಮುಖ್ಯ. ಮಕ್ಕಳಲ್ಲಿ ಇರುವಂತಹ 8 ರೀತಿಯ ಬುದ್ಧಿವಂತಿಕೆಗಳನ್ನು ಉತ್ತಮಗೊಳಿಸಲು 200 ಕ್ಕೂ ಹೆಚ್ಚು ವಿಶೇಷವಾದ ಚಟುವಟಿಕೆಗಳನ್ನು ಶಿಕ್ಷಣ ತಜ್ಞರ ತಂಡ ಸಿದ್ಧಗೊಳಿಸಿ ಈಗಾಗಲೇ ಹಲವಾರು ಶಾಲೆಗಳಲ್ಲಿ ಅಳವಡಿಸಲಾಗಿದೆ.

ಗಣಿತ, ಪರಿಸರ ವಿಜ್ಞಾನ, ಇಂಗ್ಲಿಷ್ ಹಾಗು ಭಾಷೆಗಳ ಜೊತೆಗೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಈ ಶಾಲೆಯಲ್ಲಿ ವಿಶೇಷ ಒತ್ತು ನೀಡಲಾಗುವುದು ಎಂದು ಶಾಲೆಯ ಸಂಸ್ಥಾಪಕರಾದ ಶ್ರೀಮತಿ ದೀಪಾ ರಾವ್ ತಿಳಿಸಿದ್ದಾರೆ.

ಪುಟಾಣಿಗಳಾದ ಯದುವೀರ್, ಮನ್ವಿತಾ ಬಿ. ಎಮ್ ಹಾಗೂ ಅನೂಪ್ ಪಾಟೀಲ್ ಗಿಡ ನೆಡುವುದರ ಮೂಲಕ ಶಾಲೆಯ ಉದ್ಘಾಟನೆಯನ್ನು ನೆರವೇರಿಸಿದ್ದು ವಿಶೇಷವಾಗಿತ್ತು.

ಭಾರತೀಯ ಸಂಸ್ಕೃತಿ ಮತ್ತು ನಮ್ಮ ಜನಪದ ಬೇರುಗಳನ್ನು ಮಕ್ಕಳಿಗೆ ವಿವಿಧ ಚಟುವಟಿಕೆಗಳ ಮುಖಾಂತರ ತಿಳಿಸಲಾಗುತ್ತದೆ.

ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಮತ್ತು ಬೇರೆಯವರೊಂದಿಗೆ ಸುಲಭವಾಗಿ ಬೆರೆಯಲು ಪ್ರೇರೇಪಿಸುವ ಹಲವಾರು ಚಟುವಟಿಕೆಗಳೊಂದಿಗೆ ಪುಟಾಣಿಗಳು ತಮ್ಮ ಶಿಕ್ಷಣದ ಮೊದಲ ಹೆಜ್ಜೆಯನ್ನು ಎಂ.ಐ ವಿಂಗ್ಸ್‌ನಲ್ಲಿ ಇಡಲಿದ್ದಾರೆ.

ಶಿಕ್ಷಕಿಯರಾದ ರೇಖಾಶ್ರೀ, ಅಂಬ್ರೀನ್ ಹಾಗೂ ಆಡಳಿತ ಮಂಡಳಿಯ ಶ್ರೀಮತಿ ದೀಪಾ ರಾವ್ ಮತ್ತು ಬಿ.ಟಿ. ವೆಂಕಟೇಶ್ ಹಾಗೂ ಇತರರು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಜಿಲ್ಲಾ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ

ದಾವಣಗೆರೆ, ಜೂ.18- ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಿಂದ ಆಡಳಿತ ನ್ಯಾಯಾಧಿಕರಣದಲ್ಲಿ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ ನೀಡಲು ಇದೇ ದಿನಾಂಕ 23 ರಿಂದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಜುಲೈ 24 ರೊಳಗಾಗಿ ಇಲಾಖಾ ವೆಬ್‌ಸೈಟ್ HYPERLINK "http://www.tw.kar.nic.in"www.tw.kar.nic.in ಮೂಲಕ ಅರ್ಜಿ ಸಲ್ಲಿಸಿ ಮೂಲ ಪ್ರತಿಯನ್ನು ಜಿಲ್ಲಾಡಳಿತ ಭವನದ ಕೊಠಡಿ ಸಂಖ್ಯೆ 45 ರಲ್ಲಿರುವ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

# ಅಂತರರಾಷ್ಟ್ರೀಯ ಯೋಗ ದಿನಾಚರಣೆ ನೋಂದಣಿಗೆ ಅವಕಾಶ

ದಾವಣಗೆರೆ, ಜೂ. 8 - ಜಿಲ್ಲಾ ಸಂಯುಕ್ತ ಪ್ರಾದೇಶಿಕ ಕೇಂದ್ರದ (ಸಿ.ಆರ್.ಸಿ) ವತಿಯಿಂದ ವಿಕಲಚೇತನರು ಹಾಗೂ ವಿ.ಆರ್.ಡಬ್ಲ್ಯೂ/ಯು.ಆರ್.ಡಬ್ಲ್ಯೂ/ಎಂ.ಆರ್.ಡಬ್ಲ್ಯೂ ಕಾರ್ಯಕರ್ತರಿಗೆ ಇದೇ ದಿನಾಂಕ 21ರಂದು ಸಿಕಂದರಬಾದ್‌ನಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಸಂಯುಕ್ತ ಪ್ರಾದೇಶಿಕ ಕೇಂದ್ರ (ಸಿ.ಆರ್.ಸಿ), ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಇಲ್ಲಿನ ಸಿಬ್ಬಂದಿಯಾದ ಕನಗ ಸಭಾಪತಿ ಇವರನ್ನು ಸಂಪರ್ಕಿಸಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ವಿವರಕ್ಕೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ದಾವಣಗೆರೆ ಹಾಗೂ ದೂ.9445153327, 08192-233465ಗೆ ಸಂಪರ್ಕಿಸಬಹುದೆಂದು ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ಹಾರ, ತುರಾಯಿ, ಶಾಲು-ಶಲ್ಯಗಳ ಬದಲಿಗೆ ಉತ್ತಮ ಪುಸ್ತಕ ನೀಡಲು ಸಿಎಂ ಮತ್ತು ಸಚಿವರ ಕರೆ : ಸ್ವಾಗತಾರ್ಹ



ಚನ್ನಗಿರಿ,ಜೂ. 18 - ತಮ್ಮ ಮನೆ, ಕಛೇರಿ, ಸಭೆ-ಸಮಾರಂಭಗಳಲ್ಲಿ ಗೌರವದ ರೂಪದಲ್ಲಿ ನೀಡುವ ಹಾರ, ತುರಾಯಿ, ಶಾಲು-ಶಲ್ಯಗಳ ಬದಲಿಗೆ ಉತ್ತಮವಾದ ಪುಸ್ತಕಗಳನ್ನು ನೀಡಿ ಎಂದು ಕರೆ ನೀಡಿರುವ ಕರ್ನಾಟಕ ಸರ್ಕಾರದ ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ್ ತಂಗಡಗಿ ಯವರ ನಡೆಯು ಸ್ವಾಗತಾರ್ಹವಾಗಿದೆ ಎಂದು ಚನ್ನಗಿರಿ ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ.ಮಧುಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ.

ಪುಸ್ತಕಗಳು ನಾಗರಿಕ ಸಂಸ್ಕೃತಿಯ ಜೀವಂತ ಪ್ರತೀಕವಾಗಿದ್ದು, ವ್ಯಕ್ತಿತ್ವದ ನಿರ್ಮಾಣಕ್ಕೆ ಸಹಾಯವಾಗಬಲ್ಲವು. ಮುಖ್ಯಮಂತ್ರಿ ಹಾಗೂ ಸಚಿವರ ಈ ಆದರ್ಶಣೀಯ ಕ್ರಮದಿಂದ ಯುವ ಬರಹಗಾರರಿಗೆ ಮತ್ತು ಸಾಹಿತಿಗಳಿಗೆ ಪ್ರೋತ್ಸಾಹ, ಸಹಕಾರ ನೀಡಿದಂತಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳು ಆಯೋಜಿಸುವ ಕಾರ್ಯಕ್ರಮಗಳಲ್ಲಿ ಉಡುಗೊರೆಯಾಗಿ ಪುಸ್ತಕಗಳನ್ನೇ ನೀಡುವ ಬಗ್ಗೆ ಮುಖ್ಯಮಂತ್ರಿಗಳು ಅಧಿಕೃತ ಆದೇಶವನ್ನು ಶೀಘ್ರವೇ ಹೊರಡಿಸಬೇಕು ಎಂದು ಮಧುಕುಮಾರ್ ಒತ್ತಾಯಿಸಿದ್ದಾರೆ.

# ಲೋಕ ಅದಾಲತ್‌ನಲ್ಲಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಕರೆ

## ಲೋಕ ಅದಾಲತ್ ಪೂರ್ವಭಾವಿ ಸಭೆಯಲ್ಲಿ ಹರಪನಹಳ್ಳಿ ತಾಲ್ಲೂಕಿನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ



ಹರಪನಹಳ್ಳಿ, ಜೂ.18- ಬರುವ ಜುಲೈ 8 ರಂದು ಶನಿವಾರ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದ್ದು, ಕಕ್ಷಿದಾರರು ರಾಜೀ ಆಗುವಂತಹ ಪ್ರಕರಣಗಳನ್ನು ತಮ್ಮ ವಕೀಲರ ಸಮ್ಮುಖದಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ಇತ್ಯರ್ಥ ಪಡಿಸಿಕೊಳ್ಳುವ ಸುವರ್ಣ ಅವಕಾಶವಿದೆ. ಕಕ್ಷಿದಾರರು ಇಂತಹ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ ಕಕ್ಷಿದಾರರಿಗೆ ಮನವಿ ಮಾಡಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಹರಪನಹಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕರಿಗೆ ಮತ್ತು ಕಕ್ಷಿದಾರರಿಗೆ ಲೋಕ ಅದಾಲತ್ ಪೂರ್ವಭಾವಿ ಸಭೆಯಲ್ಲಿ ದೀಪಾ ಹಚ್ಚುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಜುಲೈ 8 ರಂದು ಲೋಕ ಅದಾಲತ್ ನಡೆಯಲಿದ್ದು, ಸಾರ್ವಜನಿಕ ಕಕ್ಷಿದಾರರು ರಾಜೀ ಆಗುವಂತಹ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಂಡು ನೆಮ್ಮದಿಯ ಜೀವನದ ಜೊತೆಗೆ ಸಮಯವನ್ನು ಉಳಿಸಿ ಕೊಳ್ಳಬೇಕೆಂದು ಕಕ್ಷಿದಾರರಿಗೆ ಸಲಹೆ ನೀಡಿದರು.

ಇತ್ಯರ್ಥಪಡಿಸಲ್ಪಡುವ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳು ಮತ್ತು ಕೆಲವು ಸಣ್ಣ ಪುಟ್ಟ ಪ್ರಕರಣಗಳನ್ನು ಇಬ್ಬರೂ ಕಕ್ಷಿದಾರರು ಪರಸ್ಪರ ವಿಶ್ವಾಸದಿಂದ ಹೊಂದಾಣಿಕೆ ಮಾಡಿಕೊಂಡು, ಅನುಕೂಲವಾಗುವ ರೀತಿಯಲ್ಲಿ ರಾಜೀ ಮಾಡಿಕೊಂಡಲ್ಲಿ ನಿಮ್ಮ ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವುದಕ್ಕೆ ಸಾಧ್ಯವಾಗುತ್ತದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಂ.ಅಜ್ಜಣ್ಣ ಮಾತನಾಡಿ, ದ್ವೇಷದಿಂದ ಏನೂ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಕಕ್ಷಿದಾರರು ವೈಯಕ್ತಿಕ ದ್ವೇಷವನ್ನು ಬಿಟ್ಟು ಕುಟುಂಬ ನಿರ್ವಹಣೆಗಾಗಿ ನಿಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನ್ಯಾಯಾಲಯದಲ್ಲಿರುವ ಸಿವಿಲ್ ಮತ್ತು ಕ್ರಿಮಿನಲ್ ಸಣ್ಣ ಪುಟ್ಟ ಪ್ರಕರಣಗಳನ್ನು ನೆಮ್ಮದಿಯಿಂದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥ ಪಡಿಸಿಕೊಳ್ಳಿ ಎಂದು ಕಕ್ಷಿದಾರರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಪರ ಸರ್ಕಾರಿ ವಕೀಲ ವಿ. ಜಿ.ಪ್ರಕಾಶ್ ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಕೆ.ವಿರುಪಾಕ್ಷಪ್ಪ, ಕಾರ್ಯದರ್ಶಿ ಕೆ. ಆನಂದ, ಜಂಟಿ ಕಾರ್ಯದರ್ಶಿ ಹೂಲೆಪ್ಪ, ಸಹಾಯಕ ಸರ್ಕಾರಿ ಅಭಿಯೋಜಕರಾದ ಮೀನಾಕ್ಷಿ ಎನ್., ನಿರ್ಮಲ ಡಿ., ಹಿರಿಯ ವಕೀಲರಾದ ಕೆ.ಜಗದಪ್ಪ, ಕೆ. ಬಸವರಾಜ್, ಕೆ.ಚಂದ್ರಗೌಡ್ರು, ಪಿ. ಜಗದೀಶ್‌ಗೌಡ್ರು ಆರ್. ವಕೀಲರುಗಳಾದ ಬಿ. ಗೋಣಿಬಸಪ್ಪ, ಎಂ. ಮೃತ್ಯುಂಜಯ, ಜೆ. ಸೀಮಾ, ದಾಕ್ಷಾಯಣಿ, ರೇಣುಕಾ ಮೇಟಿ, ಕೆ. ನಾಗರಾಜ್, ಕೆ.ಎಸ್.ಮಂಜ್ಯಾನಾಯ್ಕ, ಮುತ್ತಿಗಿ ರೇವಣಸಿದ್ದಪ್ಪ, ಮುತ್ತಿಗಿ ಮಂಜುನಾಥ್, ಕೆ. ಸಣ್ಣನಿಂಗನಗೌಡ, ಬಸವರಾಜ್, ಬಾಗಳಿ ಮಂಜುನಾಥ್, ಡಿ. ಹನುಮಂತಪ್ಪ, ಎ.ಕೆ. ರಾಜಪ್ಪ, ಶಿವರಾಜ್, ಗಿರೀಶ್ ಗೌಡ, ಜಾಕೀರ್, ಬಿ.ಸಿದ್ದೇಶ್, ಓ.ತಿರುಪತಿ, ಕಾನೂನು ಸೇವಾ ಸಮಿತಿಯ ಸದಸ್ಯರಾದ ಕೊಟ್ರೇಶ್, ಬಸವರಾಜ್ ಸೇರಿದಂತೆ ಇತರರು ಇದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಕನ್ನಡ - ಸಂಸ್ಕೃತಿ ಇಲಾಖೆಗೆ 150 ಕೋಟಿ ಅನುದಾನ ನೀಡಲು ಸಿಎಂಗೆ ಒತ್ತಾಯ



**ಅಖಿಲ ಕರ್ನಾಟಕ ದ್ವಿತೀಯ ಮಹಿಳಾ ಯುವ ಸಮ್ಮೇಳನದಲ್ಲಿ ಕೆಪಿಸಿಸಿ ರಾಜ್ಯ ವಕ್ತಾರ ಮಹಾಂತೇಶ್ ಹಟ್ಟಿ**

ದಾವಣಗೆರೆ, ಜು. 18- ನೂತನ ಕಾಂಗ್ರೆಸ್ ಸರ್ಕಾರದಿಂದ ಮಂಡಿಸುವ ಬಜೆಟ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 150 ಕೋಟಿ ರೂ. ಅನುದಾನ ನೀಡಲು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಲಾಗುವುದು ಎಂದು ಕೆಪಿಸಿಸಿ ರಾಜ್ಯ ವಕ್ತಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ನಿರ್ದೇಶಕ ಮಹಾಂತೇಶ್ ಹಟ್ಟಿ ಹೇಳಿದರು.

ಕನಕಶ್ರೀ ಪ್ರಕಾಶನ ಬ್ಯಾಕೂಡ, ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ವತಿಯಿಂದ ನಗರದ ರಂಗಮಹಲ್ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಅಖಿಲ ಕರ್ನಾಟಕ ದ್ವಿತೀಯ ಮಹಿಳಾ ಯುವ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಂಬರುವ 5ನೇ ತಾರೀಖು ಬಜೆಟ್ ಪೂರ್ವಭಾವಿ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ನಾನೂ ಸಹ ಭಾಗವಹಿಸಲಿದ್ದೇನೆ. ಈ ವೇಳೆ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವಂತೆ ಒತ್ತಾಯಿಸುತ್ತೇನೆ. ಅಲ್ಲದೆ ಉತ್ತರ ಕರ್ನಾಟಕ ಕಲಾವಿದರ ನೋವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೂ, ಮುಖ್ಯಮಂತ್ರಿಗಳಿಗೂ ಮನದಟ್ಟು ಮಾಡುತ್ತೇನೆ ಎಂದು ಹೇಳಿದರು.

ಹೊಸ ಕಲಾವಿದರನ್ನು ಪ್ರೋತ್ಸಾಹಿಸುವುದು ನಮ್ಮ ಧರ್ಮ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇಲಾಖೆಯ ಯೋಜನೆಗಳನ್ನು ಕಲಾವಿದರು ಸದ್ಬಳಕೆ ಮಾಡಿಕೊಳ್ಳಬೇಕು. ಇಲಾಖೆಗೆ ಅರ್ಜಿ ಸಲ್ಲಿಸಿ ಕಲಾವಿದರು ಮಾಸಾಶನ ಪಡೆದುಕೊಳ್ಳಬೇಕು. ಹಲವಾರು ವರ್ಷಗಳಿಂದಲೂ ಅರ್ಜಿ ಸಲ್ಲಿಸಿ ಮಾಸಾಶನ ಸಿಗದೆ ಅನ್ಯಾಯವಾಗಿದ್ದರೆ ನಮ್ಮನ್ನು ಸಂಪರ್ಕಿಸಿದಲ್ಲಿ ನ್ಯಾಯ ನೀಡುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಮಾತನಾಡಿ, ಮಹಿಳೆಯನ್ನು ಸಮಾನತೆಯಿಂದ ನೋಡುವ ಕಾರ್ಯ ಮನೆಗಳಿಂದಲೇ ಆರಂಭವಾಗಬೇಕು. ಲಿಂಗ ತಾರತಮ್ಯ ಮಹಿಳೆಯರಿಂದಲೇ ಹೆಚ್ಚಾಗುತ್ತಿದೆ. ಈ ಮನಸ್ಥಿತಿ ಬದಲಾಗಬೇಕಿದೆ ಎಂದರು.

ಈಗಾಗಲೇ ಗಂಡು ಹಾಗೂ ಹೆಣ್ಣಿನ ಅನುಪಾತದಲ್ಲಿ ಸಾಕಷ್ಟು ಏರುಪೇರು ಉಂಟಾಗಿದೆ. ಆದಾಗ್ಯೂ ದೇಶದಲ್ಲಿ ಪ್ರತಿ ದಿನಕ್ಕೆ 600 ಹೆಣ್ಣು ಭ್ರೂಣ ಹತ್ಯೆಗಳು ನಡೆಯುತ್ತಿವೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮಹಿಳೆಯರ ಅಸುರಕ್ಷತೆ ಹೆಚ್ಚಾಗುತ್ತದೆ. ಗಂಡಿನಷ್ಟೇ ಸಮಾನವಾಗಿ ಹೆಣ್ಣಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿದರೆ ಅವಳು ಸಮಾಜ ಹಾಗೂ ದೇಶದ ಆಸ್ತಿಯಾಗುತ್ತಾಳೆ ಎಂದರು.

ಮಹಿಳೆ ಇಂದು ಆಟೋರಿಕ್ಷಾದಿಂದ ಅಂತರಿಕ್ಷದವರೆಗೂ, ಮನೆಯಂಗಳದಿಂದ ಮಂಗಳನ ಅಂಗಳದವರೆಗೂ ಕಾಲಿಟ್ಟದ್ದಾಳಾದರೂ ಅವಳ ಮೇಲಿನ ದೌರ್ಜನ್ಯಗಳು ಕಡಿಮೆಯಾಗಿಲ್ಲ. ವರದಕ್ಷಿಣೆ ಪಿಡುಗು ಇಂದಿಗೂ ಸಮಾಜವನ್ನು ಕಾಡುತ್ತಿದೆ. ಮಹಿಳೆ ಸಂರಕ್ಷಣೆಗಾಗಿ ಇರುವ ಕಾನೂನು ಹಲ್ಲು ಕಿತ್ತ ಹಾವಿನಂತಾಗಿದೆ. ಜಗದ ಜ್ಯೋತಿಯಾಗಬೇಕಾಗಿದ್ದ ಹೆಣ್ಣು ಇಂದು ಸಂಕಷ್ಟದ ಸರಮಾಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾಳೆ ಎಂದು ಬೇಸರ ವ್ಯಕ್ತಪಡಿಸುತ್ತಾ, ಮಹಿಳೆಯರನ್ನು ಮುಖ್ಯವಾಹಿನಿಗೆ ತರುವಂತಹ ಸಂಘ-ಸಂಸ್ಥೆಗಳ ಕಾರ್ಯ ಶ್ಲಾಘನೀಯ ಎಂದರು.

ಬಂಜಾರ ಗುರು ಪೀಠದ ಶ್ರೀ ಬಸವ ಸೇವಾ ಸರ್ದಾರ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಯುವ ಸಾಹಿತಿ ರೇಷ್ಮಾ ಶೆಟ್ಟಿ ಗೊರೂರು ಸಮ್ಮೇಳನಾಧ್ಯಕ್ಷತೆ ವಹಿಸಿದ್ದರು. ಕನಕಶ್ರೀ ಪ್ರಕಾಶನ ಬ್ಯಾಕೂಡದ ಅಧ್ಯಕ್ಷ ಸಿದ್ರಾಮ ಎಂ. ನಿಲಜಗಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಮೊಗ್ಗ ಪಶ್ಚಿಮ ಸಂಚಾರ ಪೊಲೀಸ್ ಠಾಣೆಯ ಪಿಎಸ್ಐ ಕೆ.ಎನ್. ಶೈಲಜಾ, ಸಾಧನ ವೃದ್ಧಾಶ್ರಮ ಮತ್ತು ಅನಾಥಾಶ್ರಮದ ರಾಜ್ಯಾಧ್ಯಕ್ಷರಾದ ಡಾ.ಪುಷ್ಪಲತಾ ಪವಿತ್ರರಾಜ್, ಸಮಾಜ ಸೇವಕರಾದ ಕವಿತಾ ಬಿ.ಜೆ., ಶಿಕ್ಷಣ ಇಲಾಖೆಯ ರೇವಣಸಿದ್ದಪ್ಪ ಅಂಬಿಗರ, ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಸದಸ್ಯ ಡಾ.ಬಸವರಾಜ ಗವಿಮಠ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಿಂತಕ ಎಸ್.ಹೆಚ್. ಹೂಗಾರ, ನಿವೃತ್ತ ಯೋಧ ಸುರೇಶ್ ರವಾ ಹೆಚ್., ಡಾ. ಬುರುಡೇಕಟ್ಟೆ ಮಂಜಪ್ಪ ಇತರರು ಉಪಸ್ಥಿತರಿದ್ದರು.

ಸಾಹಿತಿ ಡಾ.ಜೆ.ಎಂ. ಬಾದಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಸುಮಾ ಬ.ಹಡಪದ ಸಮ್ಮೇಳನದ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಸುಮಾ ಪ್ರಾರ್ಥಿಸಿದರು. ಕು. ಸನ್ನಿಧಿ ಸ್ವಾಗತ ನೃತ್ಯ ಪ್ರದರ್ಶಿಸಿದರು.

# ರಂಗಭೂಮಿ ಕ್ಷೇತ್ರವನ್ನು ಉಳಿಸಿ, ಬೆಳೆಸಿ

## 'ಬಳೆಗಾರ ಹನುಮವ್ವ' ನಾಟಕ ಪ್ರದರ್ಶನ ಉದ್ಘಾಟಿಸಿ ಓಂಕಾರ ಶಿವಾಚಾರ್ಯ ಶ್ರೀ



ದಾವಣಗೆರೆ, ಜು. 18- ರಂಗಭೂಮಿ ಕಲೆ ಅಳಿವಿನಂಚಿನಲ್ಲಿದ್ದು, ಈ ಕಲಾಕ್ಷೇತ್ರವನ್ನು ಉಳಿಸಿ, ಬೆಳೆಸಬೇಕಿರುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಪಿ.ಬಿ.ರಸ್ತೆಯಲ್ಲಿನ ಟಿ.ಎಂ. ವಿನಾಯಕ ಪಿ.ಎಂ.ಪಿ.ಎಸ್ ಕಾಂಪೌಂಡ್‌ನಲ್ಲಿ ಭಾನುವಾರ ಶ್ರೀ ಸಂತ ಷರೀಫ ಶಿವಯೋಗಿ ನಾಟ್ಯ ಸಂಘ ಇಂದು ಹಮ್ಮಿಕೊಂಡಿದ್ದ 'ಬಳೆಗಾರ ಹನುಮವ್ವ' ಸಾಮಾಜಿಕ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಮೊಬೈಲ್‌ಗಳು, ದೃಶ್ಯ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳ ಹಾವಳಿಯಿಂದಾಗಿ ವೃತ್ತಿ ರಂಗಭೂಮಿ ನಶಿಸುತ್ತಿರುವುದು ನಿಜಕ್ಕೂ ಬೇಸರ ತರಿಸಿದೆ ಎಂದ ಶ್ರೀಗಳು, ರಂಗಭೂಮಿ ಮನರಂಜನೆ ಜೊತೆಗೆ ಉತ್ತಮ ಸಂದೇಶಗಳನ್ನೂ ನೀಡುತ್ತದೆ. ಈ ಹಿನ್ನೆಲೆಯಲ್ಲಿ ಈ ಕ್ಷೇತ್ರವನ್ನು ಉಳಿಸಿ, ಬೆಳೆಸಬೇಕಿದೆ ಎಂದು ಹೇಳಿದರು.

ಸಾಮಾಜಿಕ ನ್ಯಾಯಸಮ್ಮತವಾದ ಸಾಹಿತ್ಯ ಮತ್ತು ಸಂಸ್ಕೃತಿಯನ್ನೊಳಗೊಂಡ ಬಳೆಗಾರ ಹನುಮವ್ವ ನಾಟಕ ಅದ್ಭುತವಾಗಿ ಮೂಡಿ ಬಂದಿದೆ. ದಾವಣಗೆರೆಯಲ್ಲಿ ಸಾಕಷ್ಟು ನಾಟಕಗಳು ಮುನ್ನೆಲೆಗೆ ಬಂದಿವೆ. ಈ ನಾಟಕ ವೀಕ್ಷಿಸಲು ಹೆಚ್ಚಿನ ಜನರು ಸೇರಿರುವುದು ಸಂತಸ ತಂದಿದೆ ಎಂದು ಹೇಳಿದರು.

ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜ ಐರಣಿ ಮಾತನಾಡಿ, ದಾವಣಗೆರೆ ಕಲೆ, ಕಲಾವಿದರ ತವರೂರಾಗಿದೆ. ಚಿಂದೋಡಿ ಹಾಗೂ ಕಂಚಿಕೆರೆ ಕುಟುಂಬದವರು ರಂಗಭೂಮಿಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ಈ ಎರಡೂ ಮನೆತನಗಳ ಮೂರನೇ ಪೀಳಿಗೆ ಈಗಲೂ ನಾಟಕಗಳಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ವಿಷಯ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್. ಅರುಣ್ ಕುಮಾರ್, ಉದ್ಯಮಿ ಟಿ. ಎಂ.ವಿನಾಯಕ ಸ್ವಾಮಿ, ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ, ಪಾಲಿಕೆ ಸದಸ್ಯೆ ಆಶಾ ಉಮೇಶ್, ಚನ್ನಬಸವಯ್ಯ, ಕೆ.ಎಂ. ಪರಮೇಶ್ವರಯ್ಯ, ನಿರ್ದೇಶಕ ಮಂಜುನಾಥ ಕುಂದೂರ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ನೀರಿನ ಸಮಸ್ಯೆ ನೀಗಿಸಿದ ಶಾಸಕ ಬಸವಂತಪ್ಪ



ದಾವಣಗೆರೆ, ಜೂ. 18- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಚನ್ನಗಿರಿ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿ, ಗೆಲುವಿಗೆ ಕಾರಣರಾದ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಶನಿವಾರ ಚನ್ನಗಿರಿ ತಾಲ್ಲೂಕಿನ ಬಸವಾ ಪಟ್ಟಣ, ಹರಲಿಪುರ, ಮರಬನಹಳ್ಳಿ, ಕೋಟೆ ಹಾಳು, ಹರೋ ಸಾಗರ ಸೇರಿದಂತೆ, ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲು ಆಲಿಸಿ, ಸ್ಥಳದಲ್ಲಿಯೇ ಕೆಲವು ಸಮಸ್ಯೆಗಳಿಗೆ ಪರಿಹಾರ ಕೊಡಿಸಿದರು.

ಹರಲಿಪುರ ಗ್ರಾಮದ ಆಸ್ಪತ್ರೆ ಮತ್ತು ಕ್ವಾಟ್ರಸ್ ನಿರ್ಮಾಣದ ಕಾಮಗಾರಿ ಪರಿಶೀಲನೆ ನಡೆಸಿದರು. ಬಳಿಕ ಉರ್ದು ಶಾಲೆಗೆ ಭೇಟಿ ನೀಡಿ ಮಕ್ಕಳ ಶಿಕ್ಷಣ ಪ್ರಗತಿ ಬಗ್ಗೆ ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದ ವೇಳೆ ಗ್ರಾಮಸ್ಥರು ಶಾಸಕರನ್ನು ಅಭಿನಂದಿಸಿದರು.

ಮರಬನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದೇವಸ್ಥಾನ ನಿರ್ಮಿಸಿ ಕೊಡುವಂತೆ ಮನವಿ ಮಾಡಿದ ಗ್ರಾಮಸ್ಥರಿಗೆ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದರು. ನಂತರ ಕೋಟೆಹಾಳ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಭೇಟಿ ನೀಡಿ, ರೈತರಿಗೆ ಸಾಲಸೌಲಭ್ಯ ನೀಡಿರುವ ಬಗ್ಗೆ ಪರಿಶೀಲನೆ ನಡೆಸಿದರು. ಬಳಿಕ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿದ ಶಾಸಕರು, ಪಡಿತರದಾರರಿಗೆ ಸಮರ್ಪಕವಾಗಿ ಪಡಿತರ ವಿತರಣೆ ಬಗ್ಗೆ ಮಾಹಿತಿ ಪಡೆದರು.

ಬಸವಾಪಟ್ಟಣ ಹೋಬಳಿ ವ್ಯಾಪ್ತಿಯ ಕೆಲವು ಗ್ರಾಮಗಳಿಗೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮಸ್ಥರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಅಹವಾಲು ಸಲ್ಲಿಸಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಸೂಚಿಸಿದರು.

ಈ ಸಂದರ್ಭದಲ್ಲಿ ಹರೋಸಾಗರ ಪ್ರಕಾಶ್, ಸಂಗಾ ನಹಳ್ಳಿ ಹನುಮಂತಪ್ಪ, ಸೈಯದ್ ಜಾಹೀರ್ ಸೇರಿದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇದ್ದರು.

# ಮಣಿಪುರದ ಬಗ್ಗೆ ಪ್ರಧಾನಿ ಮೌನ, ಕಾಂಗ್ರೆಸ್ ತರಾಟೆ

ನವದೆಹಲಿ, ಜೂ. 18 – ಮಣಿಪುರದ ಪರಿಸ್ಥಿತಿಯ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೌನವಾಗಿದ್ದಾರೆ ಎಂದು ಕಾಂಗ್ರೆಸ್ ಪಕ್ಷ ತರಾಟೆಗೆ ತೆಗೆದುಕೊಂಡಿದೆ.

ಮಣಿಪುರದಲ್ಲಿ ಮೀಟಿ ಹಾಗೂ ಕುಕಿ ಸಮುದಾಯಗಳ ನಡುವೆ ಕಳೆದ ಒಂದು ತಿಂಗಳಿನಿಂದ ನಡೆಯುತ್ತಿರುವ ಸಂಘರ್ಷದಿಂದಾಗಿ 100ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತೊಂದು ಮನ್ ಕಿ ಬಾತ್ ಕಾರ್ಯಕ್ರಮ ಮುಗಿಸಿದ್ದಾರೆ. ವಿಕೋಪ ನಿರ್ವಹಣೆಯ ಸಾಮರ್ಥ್ಯದ ಕುರಿತು ದೇಶದ ಬೆನ್ನು ತಟ್ಟಿದ್ದಾರೆ. ಆದರೆ, ಮಣಿಪುರದ ಮಾನವ ನಿರ್ಮಿತ ಬಿಕ್ಕಟ್ಟಿನ ಬಗ್ಗೆ ಮೌನವಾಗಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಪ್ರಧಾನಿ ಇದುವರೆಗೂ ಶಾಂತಿಗಾಗಿ ಕರೆ ನೀಡಿಲ್ಲ. ಮಣಿಪುರದ ಬಗ್ಗೆ ಪ್ರಧಾನಿಗೆ ನಿಜವಾಗಿಯೂ ಕಾಳಜಿ ಇದೆಯೇ? ಎಂದೂ ಅವರು ಪ್ರಶ್ನಿಸಿದ್ದಾರೆ. ಮಣಿಪುರದ ಶೇ.53ರಷ್ಟು ಜನಸಂಖ್ಯೆ ಹೊಂದಿರುವ ಮೀಟಿ ಸಮುದಾಯ ಪರಿಶಿಷ್ಟ ಜಾತಿ ಸ್ಥಾನಮಾನಕ್ಕಾಗಿ ಹೋರಾಟ ನಡೆಸುತ್ತಿದೆ.

# ಧರ್ಮಸ್ಥಳ ಸಂಘದ ಸಾಮಾಜಿಕ ಸೇವೆ ಶ್ಲಾಘನೀಯ



**ಜಗಳೂರಿನಲ್ಲಿ ಶಾಸಕ ದೇವೇಂದ್ರಪ್ಪ**

ಜಗಳೂರು,ಜೂ. 18- ಧರ್ಮಸ್ಥಳ ಸಂಘದ ಸಾಮಾಜಿಕ ಸೇವೆಗಳು ಶ್ಲಾಘನೀಯ ಎಂದು ಶಾಸಕ ಬಿ. ದೇವೇಂದ್ರಪ್ಪ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಪ್ರೇರಣ ಸಮಾಜ ಸೇವಾ ಸಂಸ್ಥೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 2023-24ನೇ ಸಾಲಿನ 139 ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ ಶಿಷ್ಯವೇತನ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಶೈಕ್ಷಣಿಕ ಜೀವನವನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕಿದೆ. ಬಡ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ಸಂಘ-ಸಂಸ್ಥೆಗಳನ್ನು ಪೋಷಕರು ಸ್ಮರಿಸಬೇಕಿದೆ. ಧರ್ಮಸ್ಥಳ ಸಂಘದಿಂದ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಮದ್ಯವರ್ಜನೆ ಶಿಬಿರ, ಸಾಲ-ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ತುಮಕೂರು ಸಿದ್ಧಗಂಗಾ ಮಠದಲ್ಲಿ ಜಾತಿ, ಲಿಂಗ ತಾರತಮ್ಯವಿಲ್ಲದ ಶಿಕ್ಷಣದ ಕೊಡುಗೆ ರಾಜ್ಯಕ್ಕೆ ಮಾದರಿಯಾಗಿದೆ. ದಾಸೋಹ ಮಠದಲ್ಲಿ ವ್ಯಾಸಂಗ ಮಾಡಿದ ಹಲವಾರು ಬಡ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಿದ್ದಾರೆ ಎಂದು ಪ್ರಶಂಸಿಸಿದರು.

ಆರಂಭದಿಂದಲೂ ನಾನೊಬ್ಬ ಸಮಾಜ ಸೇವಕನಾಗಿರುವೆ. ಕ್ಷೇತ್ರದಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವೆ. ನನಗೆ ಯಾವುದೇ ಸಂದರ್ಭದಲ್ಲಿ ಕರೆ ಮಾಡಿ. ಸಮಾಜ ಸೇವೆಗೆ ಶಾಸಕನಾಗಬೇಕಿಲ್ಲ. ನಾನು ಶಾಸಕನಾಗಿರುವುದು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಎಂದು ದೇವೇಂದ್ರಪ್ಪ ತಿಳಿಸಿದರು.

ಜಿಲ್ಲಾ ನಿರ್ದೇಶಕ ಜನಾರ್ದನ್ ಮಾತನಾಡಿ, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ 4 ದಶಕಗಳಿಂದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಬಲೀಕರಣಕ್ಕಾಗಿ ಬಡಜನರ ಪರವಾಗಿ ಕಾರ್ಯನಿರ್ವಹಿಸುತ್ತಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ 82 ಕೋಟಿ ರೂ. ಶಿಷ್ಯವೇತನ ಕಲ್ಪಿಸಿದೆ. ಇದರಿಂದ ವಿದ್ಯಾರ್ಥಿಗಳ ಇಂಜಿನಿಯರ್ ಶಿಕ್ಷಣದ ಕನಸು ನನಸಾಗುವುದು. ಅಲ್ಲದೆ ಶಿಕ್ಷಕರ ಕೊರತೆಯಿದ್ದಲ್ಲಿ ನಮ್ಮ ಸಂಸ್ಥೆ ನಿಯೋಜಿಸಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೇರಣಾ ಸಮಾಜ ಸಂಸ್ಥೆ ನಿರ್ದೇಶಕ ಸಿಲ್ವೆಸ್ಟರ್ ಪಿರೇರಾ, ಜಿಲ್ಲಾ ಜನ ಜಾಗೃತಿ ಉಪಾಧ್ಯಕ್ಷ ಡಾ. ಪಿ.ಎಸ್. ಅರವಿಂದನ್, ಸಿಎ ಮಲ್ಲಿಕಾರ್ಜುನ್, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಬಿ.ಎನ್. ಸುರೇಶ್ ರೆಡ್ಡಿ, ಉಪಪ್ರಾಂಶುಪಾಲ ಡಿ.ಡಿ. ಹಾಲಪ್ಪ, ಬಿ. ತಿಪ್ಪೇಸ್ವಾಮಿ ಸೇರಿದಂತೆ ಧರ್ಮಸ್ಥಳ ಸಂಸ್ಥೆಯ ಯೋಜನೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕೇಂದ್ರ, ರಾಜ್ಯಗಳ ಸಹಕಾರದಿಂದ ಗುಜರಾತ್‌ನಲ್ಲಿ ಜೀವ ರಕ್ಷಣೆ

ನವದೆಹಲಿ, ಜೂ. 18 – ಕೇಂದ್ರ ಹಾಗೂ ರಾಜ್ಯಗಳ ಉತ್ತಮ ಸಹಕಾರದಿಂದಾಗಿ ಗುಜರಾತ್‌ಗೆ ಬಿಪರ್‌ಜಾಯ್ ಚಂಡಮಾರುತ ಅಪ್ಪಳಿಸುವ ಮೊದಲೇ ಲಕ್ಷಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲು ಸಾಧ್ಯವಾಗಿದೆ. ಇದರಿಂದ ಹಾನಿಯ ಪ್ರಮಾಣ ಕಡಿಮೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಜರಾತ್‌ನ ಕಛ್ ಕರಾವಳಿಗೆ ಚಂಡಮಾರುತ ಕಳೆದ ಗುರುವಾರದಂದು ಅಪ್ಪಳಿಸಿತ್ತು. ಚಂಡಮಾರುತದ ಕಾರಣದಿಂದ ಯಾವುದೇ ಸಾವು ಸಂಭವಿಸಿಲ್ಲ.

ಸಾವುಗಳನ್ನು ತಪ್ಪಿಸುವ ಸಲುವಾಗಿ ಚಂಡಮಾರುತ ತೀವ್ರವಿರುವ ವಲಯದ ಹತ್ತು ಕಿ.ಮೀ. ವ್ಯಾಪ್ತಿಯಿಂದ ಜನರನ್ನು ಸ್ಥಳಾಂತರಗೊಳಿಸಲಾಗಿತ್ತು. ಕಚ್ ಜಿಲ್ಲೆ ಒಂದರಲ್ಲೇ 122 ಗ್ರಾಮಗಳನ್ನು ಗುರುತಿಸಿ, ಅಲ್ಲಿನ ಜನರನ್ನು ಸ್ಥಳಾಂತರಿಸಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಗುಜರಾತ್‌ನ ಎಂಟು ಜಿಲ್ಲೆಗಳಲ್ಲಿ ಚಂಡಮಾರುತ ಪ್ರಕೋಪ ತೀವ್ರವಾಗಿತ್ತು. ಚಂಡಮಾರುತದ ವೇಳೆ ಕಾಳಜಿ ಕೇಂದ್ರಗಳಲ್ಲಿ 707 ಮಕ್ಕಳು ಜನಿಸಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಾಂತರಕ್ಕಾಗಿ ಜನರ ಮನವೊಲಿಸುವುದು ಕಠಿಣ ಕೆಲಸವಾಗಿತ್ತು. ಗ್ರಾಮ ಪಂಚಾಯ್ತಿ ಸದಸ್ಯರಿಂದ ಹಿಡಿದು ಕೇಂದ್ರ ಸಚಿವರವರೆಗೆ ಎಲ್ಲ ಹಂತದ ಜನಪ್ರತಿನಿಧಿಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಜನರಷ್ಟೇ ಅಲ್ಲದೇ, ಜಾನುವಾರುಗಳ ರಕ್ಷಣೆಗೂ ಕ್ರಮ ತೆಗೆದುಕೊಳ್ಳಲಾಗಿತ್ತು. ಸುಮಾರು 2 ಲಕ್ಷ ಜಾನುವಾರುಗಳನ್ನು ಕರಾವಳಿಯಿಂದ ಸುರಕ್ಷಿತ ಸ್ಥಳಕ್ಕೆ ರವಾನಿಸಲಾಗಿತ್ತು ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.


## ಚುನಾವಣೆ ಪ್ರಕಟಣೆ

**ಶ್ರೀ ನಾರೇಯಣ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹರಿಹರ,** ಇದರ 2023-24 ರಿಂದ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 2.7.2023ರಂದು ಜರುಗಲಿದೆ. ಎಲ್ಲಾ ಅರ್ಹ ಮತದಾರ ಸದಸ್ಯರಿಗೆ ಚುನಾವಣಾ ವೇಳಾಪಟ್ಟಿಯನ್ನು ಅಂಚೆಯ ಮೂಲಕ ಕಳುಹಿಸಲಾಗಿದೆ. ಹೆಚ್ಚಿನ ವಿವರಕ್ಕೆ ಸದರಿ ಸೌಹಾರ್ದ ಸಹಕಾರ ಸಂಘದ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

**ಓ. ಮಂಜುನಾಥಸ್ವಾಮಿ**
ರಿಟರ್ನಿಂಗ್ ಅಫೀಸರ್
**ಶ್ರೀ ನಾರೇಯಣ ವಿವಿದೋದ್ಧೇಶ ಸೌಹಾರ್ದ ಸಹಕಾರಿ ಸಂಘ ನಿ., ಹರಿಹರ** ಹಾಗೂ ಹಿರಿಯ ಲೆಕ್ಕಪರಿಶೋಧಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧಕನಾ ಇಲಾಖೆ, ಜಗಳೂರು (ತಾ) ಜಗಳೂರು.
**ದೂರವಾಣಿ ಸಂಖ್ಯೆ : 91139 51699**


# ಗೀತಮ್ಮ ತಂಡದಿಂದ ಯೋಗದ ಮಹತ್ವ



ದಾವಣಗೆರೆ, ಜೂ. 18 - ನಗರದ ಆಂಜನೇಯ ಬಡಾವಣೆಯ, ಸಿದ್ದೇಶ್ವರ ಹೈಸ್ಕೂಲ್‌ನಲ್ಲಿ ಬಾಲಕ, ಬಾಲಕಿಯರಿಗೆ ಅಂತರರಾಷ್ಟ್ರೀಯ ಯೋಗ ಗುರುಗಳಾದ ಜಿ. ಗೀತಮ್ಮ ಮತ್ತು ತಂಡದಿಂದ ಯೋಗದ ಮಹತ್ವ ಮತ್ತು ಅರಿವು ಮೂಡಿಸುವ ಜೊತೆಗೆ, ಯೋಗ ಮುದ್ರಾ ಪ್ರಾಣಾಯಾಮ ತರಬೇತಿ ನೀಡಿದರು.

# ಸೋನಾ ಮಸೂರಿ ಕೊಡಲಾಗದು

**(1ನೇ ಪುಟದಿಂದ)** ಕೈಗಾರಿಕಾ ಘಟಕಗಳ ವಿದ್ಯುತ್ ಬೆಲೆ ಇಳಿಸುವ ಸಾಧ್ಯತೆಯನ್ನು ತಳ್ಳಿ ಹಾಕಿರುವ ಅವರು, ಎರಡು ತಿಂಗಳ ಬಿಲ್ ಒಟ್ಟಿಗೆ ಕೊಟ್ಟಿರುವ ಕಾರಣ ಹೊರೆಯಾಗಿ ಕಾಣುತ್ತಿದೆ. ಮುಂದಿನ ತಿಂಗಳು ಒಂದೇ ತಿಂಗಳಿನ ಬಿಲ್ ಬರಲಿದೆ ಎಂದರು. ವಿದ್ಯುತ್ ಬೆಲೆ ಏರಿಕೆಯ ವಿರುದ್ಧ ಜೂ.22ರಂದು ಒಂದು ದಿನದ ಬಂದ್ ನಡೆಸುವುದಾಗಿ ರಾಜ್ಯ ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆ ನಿರ್ಧರಿಸಿದೆ. ಈ ಬಗ್ಗೆ ಅಧಿಕಾರಿಗಳು ಮಾತನಾಡಿ ಮನವೊಲಿಸಲಿದ್ದಾರೆ ಎಂದು ಸಿದ್ದರಾಮಯ್ಯ ತಿಳಿಸಿದರು.

# 22ರಂದು ಬಂದ್‌ಗೆ ಕರೆ

**(1ನೇ ಪುಟದಿಂದ)** ಅಧಿಕಾರಿಗಳಿಂದಾಗಲೀ, ಸರ್ಕಾರದಿಂದಾಗಲೀ ಪರಿಹಾರ ಸಿಕ್ಕಿಲ್ಲ. ಹೀಗಾಗಿ ಬಂದ್‌ಗೆ ಕರೆ ನೀಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಸರ್ಕಾರದ ಗಮನ ಸೆಳೆಯುವ ಸಲುವಾಗಿ ನಾವು ಬಂದ್‌ಗೆ ಕರೆ ನೀಡಿದ್ದೇವೆ. ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸುವ ಆಶಯ ಇದೆ ಎಂದು ಸಂಸ್ಥೆ ತಿಳಿಸಿದೆ.

# ಕ್ಷೇತ್ರವಾರು ಬಿತ್ತನೆ ಬೀಜ ಪೂರೈಸಲು ಕ್ರಮ



**ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ**

ಹೊನ್ನಾಳಿ,ಜೂ.18- ಪ್ರಸಕ್ತ ವರ್ಷದಲ್ಲಿ ಬಿತ್ತನೆ ಬೀಜದ ಕೊರತೆಯಾಗದಂತೆ ಮುಖ್ಯಮಂತ್ರಿಗಳು ಹಾಗು ಕೃಷಿ ಸಚಿವರು ಸಭೆ ನಡೆಸಿ ಆಯಾ ಕ್ಷೇತ್ರವಾರು ರೈತರ ಬೇಡಿಕೆಗನುಗುಣವಾಗಿ ಬಿತ್ತನೆ ಬೀಜ ವಿತರಣೆಗೆ ಮುಂದಾಗಿದ್ದಾರೆ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಟಿ.ಎ.ಪಿ.ಸಿ.ಎಂ.ಎಸ್ ಆವರಣದಲ್ಲಿ ಕೃಷಿ ಇಲಾಖೆ ಸಹಾಯಧನದಡಿಯಲ್ಲಿ ರೈತರಿಗೆ ಬಿತ್ತನೆ ಬೀಜಗಳನ್ನು ವಿತರಿಸಿ ಈ ವಿಷಯ ತಿಳಿಸಿದರು.

ಸರ್ಕಾರವು ಕೃಷಿ ಇಲಾಖೆ ಮೂಲಕ ಮುಂಗಾರು ಹಂಗಾಮಿನಲ್ಲಿ ಮೆಕ್ಕೆಜೋಳ, ತೊಗರಿ ಅಲಸಂಧಿ, ಹೆಸರು, ಸೋಯಾಬೀನ್ ಹಾಗೂ ಶೇಂಗಾ ಬೆಳಗಳ ಬಿತ್ತನೆ ಬೀಜಗಳನ್ನು ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

ಪ್ರಸ್ತುತ ಮುಂಗಾರು ಹಂಗಾಮಿನಿಂದ ರಾಜ್ಯದ ರೈತ ಸಂಪರ್ಕ ಕೇಂದ್ರಗಳಲ್ಲಿ ಬಾರ್ ಕೋಡ್ ಮೂಲಕ ಬಿತ್ತನೆ ಬೀಜ ಹಾಗೂ ಕೃಷಿ ಪರಿಕರಗಳನ್ನು ವಿತರಣೆ ಮಾಡಲಾಗುವುದು ವಿಳಂಬವಾದರೆ ರೈತರು ಸಹಕರಿಸಬೇಕಾಗಿದೆ. ತಾಲ್ಲೂಕಿನ ರೈತರ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳ ಹಾಗೂ ರಸಗೊಬ್ಬರದ ದಾಸ್ತಾನಿದ್ದು, ಯಾವುದೇ ಕೊರತೆ ಇಲ್ಲವೆಂದರು.

ಕಳಪೆ ಬಿತ್ತನೆ ಬೀಜ ಮಾರಾಟ ಮಾಡುವುದನ್ನು ರೈತರು ಕೃಷಿ ಇಲಾಖೆ ಅಥವಾ ತಮ್ಮ ಗಮನಕ್ಕೆ ತಂದರೆ ಕ್ರಮ ಕೈಗೊಳ್ಳಲು ಮುಂದಾಗುವುದಾಗಿ ತಿಳಿಸಿದ ಅವರು, ಕೃಷಿ ಇಲಾಖೆಯ ಸಲಹೆಯಂತೆ ಮಳೆ ವಿಳಂಬವಾದರೂ ಜುಲೈ ಕೊನೆಯ ವಾರದವರೆಗೂ ತಾಲ್ಲೂಕಿನ ರೈತರು ಬಿತ್ತನೆ ಮಾಡಲಿದ್ದು ರಾಗಿಯ ಬೆಳೆಗೆ ಮುಂದಾಗುವಂತೆಯೂ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಕೃಷಿ ನಿರ್ದೇಶಕಿ ಪ್ರತಿಮಾ, ಕೃಷಿ ಅಧಿಕಾರಿ ಅತಿಕ್, ಟಿಎಪಿಸಿಎಂಎಸ್ ಅಧ್ಯಕ್ಷ ಗಜೇಂದ್ರಪ್ಪ, ನಿರ್ದೇಶಕರಾದ ಸೋಗಿಲು ಮಲ್ಲೇಶಪ್ಪ, ಹೆಚ್.ಎಂ.ಬಸವರಾಜ್, ಈಶ್ವರಪ್ಪ, ಶೇಖರಪ್ಪ, ಕಾರ್ಯದರ್ಶಿ ಮುರುಗೇಶ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಹನುಮಂತಪ್ಪ, ರೈತ ಮುಖಂಡರಾದ ಕೆಂಗನಹಳ್ಳಿ ಷಣ್ಮುಖಪ್ಪ, ಕ್ಯಾಸಿನಕೇರಿ ಶೇಖರಪ್ಪ, ಶಿವರಾಮ ನಾಯ್ಕ, ತರಗನಹಳ್ಳಿ ಅಶೋಕ ಇನ್ನಿತರರಿದ್ದರು.

# ಕಂದಗಲ್ಲು ಗ್ರಾಮದಲ್ಲಿ ಆಸ್ತಿ ವಿಚಾರಕ್ಕೆ ಕಲಹ: ನೂರು ಅಡಿಕೆ ಮರಗಳು ಬಲಿ



ದಾವಣಗೆರೆ, ಜೂ. 18- ಆಸ್ತಿ ವಿಚಾರದ ಕಲಹಕ್ಕೆ ಸುಮಾರು ನೂರು ಫಲಕ್ಕೆ ಬಂದಿದ್ದ ಅಡಿಕೆ ಮರಗಳು ಬಲಿಯಾದ ಘಟನೆ ತಾಲ್ಲೂಕಿನ ಕಂದಗಲ್ಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೆ.ಪಿ. ಮಂಜಪ್ಪ, ಜಗದೀಶ್, ಹಾಲೇಶ್, ಕೆ.ಪಿ. ರಾಜಪ್ಪ ಹಾಗೂ ಮತ್ತಿಬ್ಬರು ಸೇರಿದಂತೆ, ಆರು ಜನರ ಮೇಲೆ ಶ್ರೀಮತಿ ಬಿ.ಎಂ. ಪುಷ್ಪ ಹದಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸರ್ವೆ ನಂಬರ್ 94/7ರಲ್ಲಿನ ಜಮೀನು ಅಳತೆ ಮಾಡಿದಾಗ 18 ಗುಂಟೆ ಜಮೀನು ನಮಗೆ ಹೆಚ್ಚಾಗಿ ಬಂದಿತ್ತು. ಅದನ್ನೇ ನೆಪವಾಗಿಟ್ಟುಕೊಂಡು ನನ್ನ ಗಂಡ ಗುರುಮೂರ್ತಿ ಹಾಗೂ ಮಕ್ಕಳಿಗೆ ದೈಹಿಕ, ಮಾನಸಿಕ ಹಿಂಸೆ ನೀಡುತ್ತಿದ್ದರು. ಇದೀಗ ಹತ್ತು ವರ್ಷದ 100 ಅಡಿಕೆ ಸಸಿಗಳನ್ನು ಕಳೆದ ಜೂ.16 ಶುಕ್ರವಾರ ಕಡಿದು ಹಾಕಿದ್ದಾರೆ. ಇದರ ಅಂದಾಜು ಮೌಲ್ಯ ಸುಮಾರು 10 ಲಕ್ಷದಷ್ಟಿರುತ್ತದೆ. ಅಲ್ಲದೆ ಅದನ್ನು ತಡೆಯಲು ಹೋದ ನಮ್ಮ ಮೇಲೂ ಹಲ್ಲೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.


## ಸಾರ್ವಜನಿಕರ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರಾದ ಶ್ರೀ ರಮಾಕಾಂತ್ ಪ್ರಜಾಪತಿ ಬಿನ್ ರಾಮಕೃಷ್ಣ ಪ್ರಜಾಪತಿರವರು ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರತಕ್ಕ ಭಗತ್ ಸಿಂಗ್ ನಗರ 6ನೇ ಕ್ರಾಸ್ ನಿಟ್ಟುವಳ್ಳಿ ಮೇನ್ ರೋಡ್‌ನಲ್ಲಿರುವ ಡೋರ್ ನಂ.957/2, 'ಆಮಿನಾ ಮಂಜಿಲ್', ಡಾಂಗೇ ಪಾರ್ಕ್ ಎದುರಲ್ಲಿ ವಾಸವಾಗಿರುವ ಶ್ರೀಮತಿ ರಿಹಾನಾ ಎಮ್ ತಂದೆ ಮುನೀರ್ ಸಾಬ್ ರವರಿಂದ ಈ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ವಾಸದ ಮನೆಯ ಕ್ರಯದ ಕರಾರು ಪತ್ರದ ಮೂಲಕ ಖರೀದಿಸಿದ್ದಾರೆ. ಹೀಗಿದ್ದರೂ ಸಹ ಮೇಲ್ಕಂಡ ಶ್ರೀಮತಿ, ರಿಹಾನಾ ಎಮ್ ತಂದೆ ಮುನೀರ್ ಸಾಬ್ ರವರು ಬೇರೆಯವರಿಗೆ ಹೆಚ್ಚಿನ ಹಣದಾಸೆಗಾಗಿ ಪರಭಾರೆ ಮಾಡುವ ತರದೂದಿನಲ್ಲಿದ್ದಾರೆಂದು ತಿಳಿದು ಬಂದಿರುತ್ತದೆ. ಕಾರಣ ಯಾರೂ ಕೂಡ ಈ ಕೆಳಕಂಡ ಸ್ವತ್ತಿನ ಸಂಬಂಧ ಸದರಿ ಮೇಲ್ಕಂಡ ಶ್ರೀಮತಿ ರಿಹಾನಾ ಎಮ್ ತಂದೆ ಮುನೀರ್ ಸಾಬ್ ರವರ ಬಳಿಯಾಗಲೀ ಅಥವಾ ಬೇರೆ ಯಾರ ಬಳಿಯಾಗಲೀ ವ್ಯವಹರಿಸಬಾರದಾಗಿ ಈ ಮೂಲಕ ಎಚ್ಚರಿಸುತ್ತಿದ್ದೇನೆ.ಒಂದು ಪಕ್ಷ ಯಾರಾದರು ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಸಂಬಂಧ ಸದರಿ ಮೇಲ್ಕಂಡ ಶ್ರೀಮತಿ ರಿಹಾನಾ ಎಮ್ ತಂದೆ ಮುನೀರ್ ಸಾಬ್ ರವರ ಬಳಿಯಾಗಲೀ ಅಥವಾ ಬೇರೆ ಯಾರ ಬಳಿಯಾಗಲೀ ವ್ಯವಹರಿಸಿದಲ್ಲಿ ಕಷ್ಟ, ನಷ್ಟ, ಲುಕ್ಸಾನುಗಳಿಗೆ ಹೊಣೆಗಾರರಾಗುತ್ತೀರಿ. ತಿಳಿಯತಕ್ಕದ್ದು ಹಾಗೂ ನನ್ನ ಕಕ್ಷಿದಾರರು ಯಾವುದೇ ರೀತಿ ಜವಾಬ್ದಾರರಾಗುವುದಿಲ್ಲ ತಿಳಿಯಿರಿ.

**ಷೆಡ್ಯೂಲ್**

ದಾವಣಗೆರೆ ಸಬ್ ರಿಜಿಸ್ಟ್ರಾರ್‌ವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ, ದಾವಣಗೆರೆ ಸಿಟಿ, ಭಗತ್ ಸಿಂಗ್ ನಗರ, ದಕ್ಷಿಣ 2ನೇ ಅಡ್ಡರಸ್ತೆಯಲ್ಲಿಬರತಕ್ಕಸ್ವತ್ತಿನಸಂಖ್ಯೆ.578-92/ಎ-0-1ಅಳತೆ:6.096012x12.192024 =74.32224 ಚದರ ಮೀಟರ್‌ವುಳ್ಳ ಖಾಲಿ ನಿವೇಶನದಲ್ಲಿ ನಿರ್ಮಿಸಿರುವ ವಾಸದ ಮನೆಗೆ ಪ್ರತ್ಯೇಕ ವಿದ್ಯುಚ್ಛಕ್ತಿ, ನೀರು ಹಾಗೂ ಶೌಚಾಲಯದ ಸೌಕರ್ಯಗಳು ಸಹ ಒಳಗೊಂಡ ಆರ್. ಸಿ.ಸಿ. ಹೊದಿಕೆಯುಳ್ಳ ವಾಸದ ಮನೆಗೆ ಚಕ್ಕುಬಂದಿ : ಪೂರ್ವಕ್ಕೆ: ಇದೇ ನಂಬರ್ ಪೈಕಿ ಉಳಿದ ಸ್ವತ್ತು, ಪಶ್ಚಿಮಕ್ಕೆ : ಸೈಟ್ ನಂ.38, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ ಕನ್ಸರ್‌ವೆನ್ಸಿ, ಈ ಮಧ್ಯದ ಸೊತ್ತು ಒಂದು ಸದರಿ ಕ್ರಯದ ಕರಾರು ಪತ್ರಕ್ಕೆ ಒಳಪಟ್ಟಿರುತ್ತದೆ.

**(ಕೆ.ಆರ್. ಅಪ್ಪಾಜಿ)** ಬಿ.ಕಾಂ., ಎಲ್‌ಎಲ್.ಬಿ
**ವಕೀಲರು,**
#544/4, ಕೆಟಿಜೆ ಕಾಂಪೌಂಡ್, ಕೆ.ಬಿ. ಬಡಾವಣೆ,
ದಾವಣಗೆರೆ-577002 **ಮೊ : 98445 85155**

# ಬಂಗಾರದ ಕಡಲೆ ಕಾಳಿನ ಹೊಲ ನಿರ್ಮಾಣ ಮಾಡಿದ ರುಕ್ಮಿಣಿಕಾಂತ ಪಂಡರೀನಾಥ

ಮಹಾರಾಷ್ಟ್ರದ ಅಧ್ಯಾತ್ಮಿಕ ರಾಜಧಾನಿಯಾದ ಶ್ರೀಕ್ಷೇತ್ರ ಪಂಡರೀಪುರವು ಶ್ರೀ ಪಾಂಡುರಂಗ ರುಕ್ಮಿಣಿದೇವಿಯ ವಾಸಸ್ಥಾನವಾಗಿದ್ದು, ಇಡೀ ಜಗತ್ತಿನ ಇತಿಹಾಸದ ಪರಮ ಪವಿತ್ರ ಮುಕ್ತಿದಾಯಕ ಕ್ಷೇತ್ರವೆನಿಸಿದೆ. ಇಲ್ಲಿ ಭಗವಂತ ಸಂತಮಣಿಗಳಾದ ಶ್ರೀ ನಾಮದೇವರು, ಶ್ರೀ ತುಕಾರಾಮರು, ಶ್ರೀ ಏಕನಾಥರು, ಶ್ರೀ ಜ್ಞಾನೇಶ್ವರರು ಶ್ರೀನಿವೃತ್ತಿನಾಥರು, ಶ್ರೀ ಸೋಪಾನದೇವರು, ಸಂತ ಮುಕ್ತಾಬಾಯಿ ಇನ್ನು ಮುಂತಾದ ಸಂತಮಣಿಗಳೊಂದಿಗೆ ನಲಿದಾಡಿದ, ಊಟ ಮಾಡಿದ, ಮಾತನಾಡಿದ ಮತ್ತು ತನ್ನ ಲೀಲಾವಿನೋದವನ್ನು ತೋರಿಸಿದ ಕ್ಷೇತ್ರ. ಇಲ್ಲಿ ಭಗವಂತ ತನ್ನ ಭಕ್ತೆ ಸಂತ ಜನಾಬಾಯಿಯೊಂದಿಗೆ ಬೀಸುವ ಕಲ್ಲಿನಿಂದ ಧಾನ್ಯವನ್ನು ಬೀಸಿದ್ದಾನೆ ಮತ್ತು ಮಜ್ಜಿಗೆಯನ್ನು ಕಡೆದಿದ್ದಾನೆ. ಪಂಡರೀಪುರದ ಹತ್ತಿರ ಇರುವ ಗೋಪಾಳಪುರದ ಶ್ರೀ ಕೃಷ್ಣನ ಮಂದಿರದಲ್ಲಿ ಭಗವಂತ ತನ್ನ ಕೈಯ್ಯಾರೆ ಬೀಸಿದ ಬೀಸುವ ಕಲ್ಲು ಮತ್ತು ಮಜ್ಜಿಗೆ ಕಡೆದ ಕಡಾಯಿಯನ್ನು ಮತ್ತು ಇತರೆ ಪರಿಕರಗಳನ್ನು ಇಂದಿಗೂ ಕಾಣಬಹುದಾಗಿದೆ.



ಶ್ರೀ ಗುರು ಶಂಕರಾಚಾರ್ಯರು ಶ್ರೀ ಕ್ಷೇತ್ರಕ್ಕೆ ಬಂದು ಭಗವಂತನ ದರ್ಶನ ಮಾಡಿ 8 ಶ್ಲೋಕಗಳಿಂದ ಕೂಡಿದ ಶ್ರೀ ಪಾಂಡುರಂಗಾಷ್ಟಕವನ್ನು ಬರೆದು ಭಕ್ತರಿಗೆ ನೀಡಿದ್ದಾರೆ. ಇಂದಿಗೂ ಇವರು ಬರೆದ ಶ್ರೀ ಪಾಂಡುರಂಗಾಷ್ಟಕವು ಪ್ರತಿನಿತ್ಯ ಲಕ್ಷಾಂತರ ಭಕ್ತರ ನಾಲಿಗೆಯ ಮೇಲೆ ನಲಿದಾಡುತ್ತಿರುತ್ತದೆ.

ಇವರಲ್ಲದೇ ಶ್ರೀ ರಾಮಾನುಜಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀಪಾದರಾಜರು, ಶ್ರೀ ವ್ಯಾಸರಾಜರು, ಜಗನ್ನಾಥ ದಾಸರು, ಶ್ರೀ ಗೋಪಾಲದಾಸರು, ಭಗವಂತನ ದರ್ಶನ ಮಾಡಿ ಅವನ ಮಹಿಮೆಯನ್ನು ತಮ್ಮ ಕೀರ್ತನೆಗಳಲ್ಲಿ ಕೊಂಡಾಡಿ ಪಾಡಿದ್ದಾರೆ.

ಒಮ್ಮೆ ಉಡುಪಿಯ ಸೋದೆ ಮಠದ ಯತಿಗಳಾದ ಶ್ರೀ ಗುರುವಾದಿರಾಜರು ಪಂಡರೀಪುರಿಯಲ್ಲಿ ವಾಸ್ತವ್ಯ ಮಾಡಿದಾಗ ಒಂದು ಘಟನೆ ಜರುಗಿತು. ಪಂಡರೀಪುರದಲ್ಲಿ ಸಂತ ಗೋಪಾಲನೆಂಬ ಜಮೀನ್ದಾರನಿದ್ದನು. ಇವನು ಪಾಂಡುರಂಗನ ಪರಮ ಭಕ್ತನಾಗಿದ್ದನು. ಇವನ ಹೊಲವು ಭೀಮಾ ನದಿ ತೀರದಲ್ಲಿತ್ತು. ಅದರಲ್ಲಿ ಆಗ ಕಡಲೆ ಬಿತ್ತಿದ್ದ. ಅದು ಬಹಳ ಸಮೃದ್ಧವಾಗಿ ಬೆಳೆದಿತ್ತು. ಗೋಪಾಲ ತನ್ನ ಹೊಲದ ರಕ್ಷಣೆಯನ್ನು ಮಾಡುತ್ತಿದ್ದ. ಒಂದು ದಿನ ಬಿಳಿ ಕುದುರೆಯೊಂದು ತನ್ನ ಹೊಲಕ್ಕೆ ನುಗ್ಗಿ ಸಾಕಷ್ಟು ಕಡಲೆ ತಿಂದಿತು. ಅದನ್ನು ಹೊಡೆದೋಡಿಸಲು ಬರುವಷ್ಟರಲ್ಲಿ ಕಣ್ಣಿಗೆ ಕಾಣದಾಯಿತು. ಗೋಪಾಲ ಕುದುರೆಯ ಯಜಮಾನ ಯಾರೆಂದು ತಿಳಿಯಲು, ಶ್ರೀ ವಾದಿರಾಜ ಯತಿಗಳು ಎಂದು ತಿಳಿದು, ಅವರ ಬಳಿ ಬಂದು ನಡೆದ ಸಂಗತಿಯನ್ನು ತಿಳಿಸಿದ. ಆಗ ವಾದಿರಾಜರು ನಮ್ಮ ಬಳಿ ಯಾವ ಕುದುರೆಯೂ ಇಲ್ಲ ಎಂದರು. ಗೋಪಾಲನು ಇವರ ಬಿಡಾರವನ್ನು ಹುಡುಕಿದನು. ಕುದುರೆಯು ಕಾಣಲಿಲ್ಲ. ಆಗ ಶ್ರೀ ವಾದಿರಾಜರು ಗೋಪಾಲನಿಗೆ ನಾಳೆ ಮತ್ತೇನಾದರೂ ಕುದುರೆ ಬಂದು ಕಡಲೆ ತಿಂದರೆ ನಮಗೆ ತಕ್ಷಣ ಬಂದು ಹೇಳು, ಅದಕ್ಕೇನು ಮಾಡಬೇಡ ಎಂದು ಹೇಳಿದರು. ಗೋಪಾಲ ಮರಳಿ ಬಂದು ಜಾಗ್ರತೆಯಿಂದ ಹೊಲವನ್ನು ಕಾಯಲು, ಮರುದಿನ ಮತ್ತೆ ಕುದುರೆ ಬಂದ ಕಡಲೆ ತಿನ್ನಹತ್ತಿತು. ತಕ್ಷಣ ಗೋಪಾಲನು ಓಡುತ್ತಾ ಬಂದು ವಿಷಯ ತಿಳಿಸಿದ. ಶ್ರೀ ವಾದಿರಾಜರು ತಕ್ಷಣ ಬಂದು ನೋಡಲು ಹೊಲದ ತುಂಬಾ ಕಡಲೆ ಕಾಳುಗಳಿಂದ ತುಂಬಿ ಕೂಡಿತ್ತು. ಗೋಪಾಲನಿಗೆ ಆಶ್ಚರ್ಯವಾಗಿತ್ತು. ಗಿಡದಲ್ಲಿನ ಕಡಲೆ ಬುಡ್ಡಿಯನ್ನು ಒಡೆದು ನೋಡಲು ಅದರಲ್ಲಿ ಬಂಗಾರದ ಕಡಲೆಗಳು ತುಂಬಿದ್ದವು. ಗೋಪಾಲನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನು ಓಡೋಡಿ ಬಂದು ಗುರುಗಳ ಪಾದಕ್ಕೆ ನಮಸ್ಕರಿಸಿ, ಪೂಜ್ಯರೇ ನಿಮ್ಮ ಮತ್ತು ನಿಮ್ಮ ಕುದುರೆಯ ಸ್ಪರ್ಷದಿಂದ ನನ್ನ ಹೊಲ, ನಾನು ಪಾವನನಾಗಿ ಶ್ರೀಮಂತನಾದೆ. ನನ್ನನು



ಹರಸಿ, ಆಶೀರ್ವದಿಸಿ ಎಂದನು. ಆಗ ವಾದಿರಾಜರು ಗೋಪಾಲ ನೀನು ನಿಜವಾಗಿ ಧನ್ಯನು. ನಾನು ನಿತ್ಯ ಪೂಜಿಸುವ ದೇವರು ನನಗೆ ದರುಶನ ಕೊಟ್ಟಿಲ್ಲ. ದರುಶನ ಪಡೆದ ನೀನೇ ಧನ್ಯ. ನಿನ್ನ ಜೀವನ ಸಾರ್ಥಕವಾಯಿತು ಎಂದು ಆಶೀರ್ವದಿಸಿದರು.

ಶ್ರೀ ಸಂತ ಗೋಪಾಲನ ಭಕ್ತಿಗೆ ಭಗವಂತ ಅವನ ಹೊಲದಲ್ಲಿ ಕುದುರೆಯ ರೂಪದಲ್ಲಿ ಬಂದು ಕಡಲೆ ಹೊಲವನ್ನು ಮೇಯುವಂತಾಯ್ತು ಮತ್ತು ಗೋಪಾಲನಿಗೆ ಭಗವಂತನ ದರ್ಶನವಾಯಿತು. ಗೋಪಾಲ ಹೊಲದಲ್ಲಿ ಬಂಗಾರದ ಕಡಲೆಕಾಳುಗಳನ್ನು ಸ್ವಲ್ಪ ಭಾಗ ಬಡವರಿಗೆ ನೀಡಿದ. ಶ್ರೀ ಪಾಂಡುರಂಗ ಗೋಪಾಲನ ಹೊಲದಲ್ಲಿ ಬಂಗಾರದ ಕಡಲೆಕಾಳುಗಳನ್ನು ನಿರ್ಮಿಸಿ ಶ್ರೀಮಂತನನ್ನಾಗಿ ಮಾಡಿದ. ಭಗವಂತ ತನ್ನ ಭಕ್ತರನ್ನು ಎಡೆಬಿಡದೆ ಕಾಯುತ್ತಾನೆ ಎಂಬುದಕ್ಕೆ ಇದು ಚಿಕ್ಕ ನಿದರ್ಶನ. ಅದಕ್ಕೆ ಅವನನ್ನು ಭಕ್ತವತ್ಸಲನೆಂದು ಕರೆಯುವುದು ಅವನು ಓ ನನ್ನ ಕರೆಗೆ ಓಗೊಡುತ್ತಾನೆ. ಇದಕ್ಕೆಲ್ಲಾ ಭಕ್ತಿ ಬೇಕು. ಅದು ಸದಾ ಹೃದಯ ಮಂದಿರದಲ್ಲಿ ತುಂಬಿರಬೇಕು. ಇದರಿಂದ ಮುಂದೆ ಬರುವ ಕಷ್ಟಗಳನ್ನು ದೂರ ಮಾಡುವುದರಲ್ಲಿ ಯಾವುದೇ ಸಂದೇಹವಿಲ್ಲ. ಅದಕ್ಕೆ ನಾವು ಮನಸ್ಸು ಮಾಡಿ ಪ್ರಯತ್ನಿಸಬೇಕು.

ಶೈವ ಮತ್ತು ವೈಷ್ಣವ ಸಂಗಮವಾದ ಶ್ರೀಕ್ಷೇತ್ರ ಪಂಡರೀಪುರಿಯಲ್ಲಿ ಈ ವಾರ ಶ್ರೀ ಪಾಂಡುರಂಗನಿಗೆ ಆಷಾಢ ಏಕಾದಶಿ ಜಾತ್ರೆಯ ಸಂಭ್ರಮ. ಭಕ್ತ ಜನರು, ಸಂತಮಣಿಗಳು, ದಾಸಮಣಿಗಳು ಸಂತಸದಿಂದ ನಲಿದಾಡುವ ವಾರ. ಶ್ರೀ ಕ್ಷೇತ್ರ ಆಳಂದಿಯಿಂದ ಶ್ರೀ ಗುರು ಜ್ಞಾನೇಶ್ವರ ಮಹಾರಾಜರಥ. ದೇಹೂ ನಗರದಿಂದ ಸಂತ ತುಕಾರಾಮರ ರಥ, ಪೈಠದಿಂದ ಶ್ರೀ ಏಕನಾಥ ಮಹಾರಾಜರ ರಥ, ಶ್ರೀ ಗುರು ನಿವೃತ್ತಿನಾಥರ ರಥ, ಶ್ರೀ ಸೋಪಾನದೇವರ ರಥ, ಶ್ರೀ ಮುಕ್ತಾಬಾಯಿ ರಥ ಮುಖ್ಯವಾದವು. ಇವುಗಳಲ್ಲದೇ ಪಂಡರೀಪುರಿಯ ದಶ ದಿಕ್ಕುಗಳಿಂದ ದಶಮಿಯ ದಿನದಂದು ಆಗಮಿಸುವ ರಥಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಸುಮಾರು 25 ರಿಂದ 30 ಲಕ್ಷದಷ್ಟು ಜನಸಾಗರ ದಶಮಿಯ ದಿನದಂದು ಸೇರಿರುತ್ತಾರೆ. ಮತ್ತು ಎಲ್ಲಾ ರಥಗಳು ಅಂದು ಶ್ರೀಕ್ಷೇತ್ರ ಪಂಡರೀಪುರಿಯನ್ನು ಪ್ರವೇಶ

## ನಾಳೆಯಿಂದ ಆಷಾಢ ಏಕಾದಶಿಯ ಜಾತ್ರಾ ಸಂಭ್ರಮ

ಮಾಡುತ್ತವೆ. ಇವರೆಲ್ಲರು ಪಾದಯಾತ್ರೆಯ ಮೂಲಕ ಬರುತ್ತಾರೆ. ಕೈಯಲ್ಲಿ ಟಾಳಗಳನ್ನು ಹಿಡಿದು, ಮೃದಂಗ ಬಾರಿಸುತ್ತಾ, ಪಂಡರೀನಾಥನ ನಾಮ ಘರ್ಜನೆಯನ್ನು ಮಾಡುತ್ತಾ, ನಲಿಯುತ್ತಾ, ಕುಣಿಯುತ್ತಾ, ಸರತಿಯ ಸಾಲಿನಲ್ಲಿ ಸಾಗುವ ದೃಶ್ಯ ನಯನ ಮನೋಹರವಾಗಿರುತ್ತದೆ.

ಇತ್ತ ಕಡೆ ಪಾಂಡುರಂಗನ ದರ್ಶನಕ್ಕೆ ಸುಮಾರು 30 ಮೈಲಿ ದೂರದಿಂದ ಸರತಿಯ ಸಾಲಿನಲ್ಲಿ ಆಗಮಿಸಿ ಗಾಳಿ, ಮಳೆ, ಬಿಸಿಲು ಎನ್ನದೆ ಸರತಿಯ ಸಾಲಿನಲ್ಲಿ ನಿಂತು ಪಾದಮುಟ್ಟಿ ದರ್ಶನ ಪಡೆಯುತ್ತಾರೆ. ದೂರದರ್ಶನಕ್ಕೆ ಪ್ರತ್ಯೇಕ ಸರತಿ ಸಾಲಿನ ವ್ಯವಸ್ಥೆಯಲ್ಲಿ ದರ್ಶನ ಮಾಡುತ್ತಾರೆ. ಇಷ್ಟೂ ಜನರಿಗೆ ದಾಸೋಹ ಕೇಂದ್ರದಲ್ಲಿ ಉಪಹಾರ ಮತ್ತು ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ನಗರದ ಹಲವಾರು ಕಡೆಗಳಲ್ಲಿ ಈ ರೀತಿ ವ್ಯವಸ್ಥೆ ಮಾಡಿರುತ್ತಾರೆ. ದೇವಸ್ಥಾನದ ವತಿಯಿಂದ ತುಕಾರಾಮ ಧರ್ಮಶಾಲೆಯಲ್ಲಿ ಮಹಾಪ್ರಸಾದದ ವ್ಯವಸ್ಥೆ ಇರುತ್ತದೆ.

ದಿ. 29.06.23ನೇ ಗುರುವಾರ ಏಕಾದಶಿ ದಿನದಂದು ಶ್ರೀ ಪಾಂಡುರಂಗ ಸ್ವಾಮಿಯ ರಥೋತ್ಸವ ಅತ್ಯಂತ ವೈಭವದಿಂದ ಜರುಗುತ್ತದೆ. ಅಂದು ಸ್ವಾಮಿಯ ಎಲ್ಲಾ ಭಕ್ತ ವೃಂದಕ್ಕೆ ಅರಸಿ ಆಶಿಸುತ್ತಾನೆ. ಭಕ್ತರು ಉತ್ತತ್ತಿ ಬಾಳೆ ಹಣ್ಣು ರಥೋತ್ಸವದ ಮೇಲೆ ಎಸೆದು ಭಕ್ತಿ ಸಮರ್ಪಣೆ ಮಾಡುತ್ತಾರೆ.

**ಇಲ್ಲಿಯ ದಾನ-ಧರ್ಮದ ವಿಧಗಳು :** ಇಲ್ಲಿ ಮಾಡುವ ದಾನ ಧರ್ಮಗಳು ಎಲ್ಲರ ಕುತೂಹಲ ಮೂಡಿಸುತ್ತವೆ. ಉದಾ : ಖರ್ಜೂರದ 1 ಕೆ.ಜಿ. ಬೆಲೆ 120 ರೂ. ಇದ್ದರೆ ಇಲ್ಲಿ 20ರೂ.ನಂತೆ ಮಾರುತ್ತಾರೆ. ಇದರಂತೆ ಸೇಬು, ಬಾಳೆಹಣ್ಣು, ಹಾಲು ಇತ್ಯಾದಿಯನ್ನು ಬಹಳ ಕಡಿಮೆ ದರದಲ್ಲಿ ಮಾರುತ್ತಾರೆ. ದೊಡ್ಡ ದೊಡ್ಡ ಶಾಮಿಯಾನ ಹಾಕಿ ಉಚಿತ ಪ್ರಸಾದದ ವ್ಯವಸ್ಥೆ ಮಾಡಿರುತ್ತಾರೆ. ಹೋಟೆಲ್‌ಗಳಲ್ಲಿ ಕಾಫಿ, ಟೀ, ತಿಂಡಿ ಕಡಿಮೆ ದರದಲ್ಲಿ ನೀಡುತ್ತಾರೆ.

**ಇಲ್ಲಿನ ವಿಶೇಷತೆ :**ಚಂದ್ರಭಾಗ (ಭೀಮಾ) ನದಿಯಲ್ಲಿ ಸ್ನಾನ ಮಾಡಿ, ಸ್ವಾಮಿಯ ದರ್ಶನ ಮಾಡುವಾಗ ಮನದ ಬೇಡಿಕೆಯನ್ನು ಸಲ್ಲಿಸಿದರೆ, ಅದು ಖಂಡಿತವಾಗಿಯೂ ನೆರವೇರುವುದರಲ್ಲಿ ಯಾವುದೇ ಸಂಶಯವಿಲ್ಲ. ಇದೇ ಈ ಸ್ವಾಮಿಯ ವೈಶಿಷ್ಟ್ಯತೆ. ವಿಸ್ಮಯಕಾರಿ ರೀತಿಯಲ್ಲಿ ನೆರವೇರುತ್ತದೆ. ಉದಾ : ಜಾತ್ರೆಯಲ್ಲಿ ಸೇರುವ 30ಲಕ್ಷದಷ್ಟು ಜನರು ಮನೆ, ಮಠ ಎಲ್ಲವನ್ನೂ ಬಿಟ್ಟು ತಿಂಗಳುಗಟ್ಟಲೆ ಪಾದಯಾತ್ರೆಯಲ್ಲಿ ಭಾಗವಹಿಸಿ, ಅವನ ನಾಮ ಸ್ಮರಣೆಯಲ್ಲಿ ತಲ್ಲೀನರಾಗಿರುತ್ತಾರೆ. ಬೇಡಿದ ವರಗಳ ನೀಡುವ ಪಾಂಡುರಂಗ ಭಕ್ತಿಯ ಮುಕ್ತಿಯ ಆರಾಧ್ಯದೇವತೆ. ಒಮ್ಮೆ ಬಂದರೆ ಮತ್ತೊಮ್ಮೆ ಬರುವಂತೆ ಮಾಡುತ್ತಾನೆ. ಇಲ್ಲಿ ಅನೇಕ ಭಕ್ತಿಯ ಚಮತ್ಕಾರಗಳು ನಡೆಯುತ್ತಿರುತ್ತವೆ. ಇಲ್ಲಿ ಉಳಿದುಕೊಳ್ಳಲು ಸಾಕಷ್ಟು ಧರ್ಮಶಾಲೆಗಳಿವೆ. ಪ್ರತ್ಯೇಕವಾದ ಲಾಡ್ಜ್‌ಗಳಿವೆ. ಇಲ್ಲಿ ಉತ್ತಮವಾದ ಸೇವಾ ಸೌಲಭ್ಯ ಇರುತ್ತದೆ. ಇಲ್ಲಿಗೆ ಬರುವ ಭಕ್ತಿರಿಗೆ ಸಾರಿಗೆ ಇಲಾಖೆಯಿಂದ ಬಸ್ ವ್ಯವಸ್ಥೆ ಇದೆ ಮತ್ತು ಪ್ರತಿ ಗುರುವಾರ ಬೆಂಗಳೂರಿನಿಂದ ದಾವಣಗೆರೆ ಮಾರ್ಗವಾಗಿ ಪಂಡರಿಪುರಕ್ಕೆ ನೇರವಾದ ರೈಲು ಸಂಚಾರದ ವ್ಯವಸ್ಥೆ ಇರುತ್ತದೆ.

ಕೊನೆಯದಾಗಿ ಸಂತ ತುಕಾರಾಮರು ಶ್ರೀಕ್ಷೇತ್ರವನ್ನು ವರ್ಣಿಸುತ್ತಾ, ಯಾರು ಸಂಸಾರ ಸಮೇತರಾಗಿ ಬಂದು ಪಂಡರಿರಾಯನ ದರ್ಶನ ಮಾಡುತ್ತಾರೋ ಅವರು ಮುಕ್ತಿಯ ಪದವಿಯನ್ನು ಪಡೆಯುತ್ತಾರೆಂದು ತಮ್ಮ ಅಭಂಗ ವಾಣಿಯಲ್ಲಿ ತಿಳಿಸಿದ್ದಾರೆ. ಬನ್ನಿ ಪಂಡಾಪುರಕ್ಕೆ ಹೋಗೋಣ. ಇದು ಪಾಂಡುರಂಗನ ಚರಣ ಕಮಲಕ್ಕೆ ಅರ್ಪಿಸುವ ತುಳಸಿ ಪುಷ್ಪಮಾಲೆ.



**-ಬಾಗೂರು ಜಿ. ಪರಪ್ಪ ಸೇಲ್ಕರ್,**
ನಿವೃತ್ತ ಶಿಕ್ಷಕರು,
ದಾವಣಗೆರೆ.
ಮೊ. 63639 65282

## ಒತ್ತಡ ನಿವಾರಣೆಗೆ ಔಷಧಿ ರಹಿತ ಮದ್ದು 'ಯೋಗ'



### ಅಂತರರಾಷ್ಟ್ರೀಯ ಯೋಗ ಗುರು ಗೀತಮ್ಮಾಜೀ

ದಾವಣಗೆರೆ, ಜೂ. 18- ನಗರದ ವಿಜ್ಞಾನ ಅಕಾಡೆಮಿಯಲ್ಲಿ ಅಂತರರಾಷ್ಟ್ರೀಯ ಯೋಗ ಗುರು, ಸಮಾಜ ಸೇವಕರಾದ ಗೀತಮ್ಮಾಜೀ ಅವರು ವಿದ್ಯಾರ್ಥಿಗಳಲ್ಲಿ ಒತ್ತಡ ನಿವಾರಣೆಗೆ ಯೋಗ ಮುದ್ರಾ ಪ್ರಾಣಾಯಾಮ ಅತ್ಯಂತ ಅವಶ್ಯಕ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಒತ್ತಡಕ್ಕೆ ಒಳಗಾಗುತ್ತಿದ್ದಾರೆ, ಮನೋರೋಗಕ್ಕೆ ಮದ್ದಿಲ್ಲ, ಉತ್ತಮ ಆರೋಗ್ಯಕ್ಕೆ ನೀರು - ನಾರು - ನಿದ್ದೆ ಅತ್ಯಂತ ಅವಶ್ಯಕ ಇವುಗಳಲ್ಲಿ ವ್ಯತ್ಯಾಸ ಆದಾಗ ಮನುಷ್ಯ ಅನಾರೋಗ್ಯಕ್ಕೆ ತುತ್ತಾಗುತ್ತಾನೆ.

ವಿದ್ಯಾರ್ಥಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮಲಬದ್ಧತೆ ಯಿಂದ ನರಳುತ್ತಿದ್ದಾರೆ ಇದರಿಂದ ಮಾನಸಿಕ ಒತ್ತಡ ಹೆಚ್ಚಾಗಿ ಏಕಾಗ್ರತೆ, ನೆನಪಿನ ಶಕ್ತಿಯ ಕೊರತೆ ಉಂಟಾಗುತ್ತಿದೆ. ಇದರ ನಿವಾರಣೆಗೆ ಸುಲಭವಾಗಿ, ಕಡಿಮೆ ಸಮಯದಲ್ಲಿ ಅಭ್ಯಾಸ ಮಾಡಬಹುದಾದ, ಔಷಧಿ ರಹಿತ ಚಿಕಿತ್ಸಾ ಕ್ರಮಗಳಾದ ಯೋಗಾಸನ, ಮುದ್ರಾ ಪ್ರಾಣಾಯಾಮ, ಓಂಕಾರ ಧ್ಯಾನ, ಆಕ್ಯುಪ್ರೆಶರ್ ಚಿಕಿತ್ಸೆಯ ಪರಿಣಾಮಕಾರಿ ವಿಧಾನಗಳನ್ನು ಪ್ರಾಯೋಗಿಕ ತರಬೇತಿ ನೀಡಿದರು, ತರಬೇತಿ ಸ್ಥಳದಲ್ಲಿಯೇ ಅದರ ಪ್ರಯೋಜನ, ಲಾಭಗಳನ್ನು ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳ ಮೂಲಕ ತಿಳಿಸಿದರು.

ಪ್ರಾಂಶುಪಾಲ ಚಂದ್ರಶೇಖರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ದುಪ್ಪಟ್ಟು ಹಣ ನೀಡುವುದಾಗಿ ನಂಬಿಸಿ: ವಂಚನೆ

ದಾವಣಗೆರೆ, ಜೂ. 18- ಕಡಿಮೆ ಬೆಲೆಗೆ ಕಾರ್ ಕೊಡಿಸುವುದಾಗಿಯೂ, 60 ದಿನದಲ್ಲಿ ಎರಡು ಪಟ್ಟು ಹಣ ಕೊಡುವುದಾಗಿಯೂ ನಂಬಿಸಿ 6 ಜನರಿಂದ 69.50 ಸಾವಿರ ರೂ. ವಂಚಿಸಿರುವುದಾಗಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಎಂಟರ್ ಪ್ರೈಸಸ್‌ನ ಎನ್.ಎಸ್. ತಿಪ್ಪೇಸ್ವಾಮಿ ಎಂಬುವವರ ಮೇಲೆ ಜಿ. ಸಿದ್ದೇಶ್ ಕೆಟಿಜೆ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## ತುರ್ತು ಪರಿಸ್ಥಿತಿ ಭಾರತದ ಕರಾಳ ಅವಧಿ : ಮೋದಿ

ನವದೆಹಲಿ, ಜೂ. 18- ತುರ್ತು ಪರಿಸ್ಥಿತಿ ಭಾರತದ ಕರಾಳ ಸಮಯ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಆ ಸಂದರ್ಭದಲ್ಲಿ ಪ್ರಜಾಪ್ರಭುತ್ವ ಬೆಂಬಲಿಸುವವ ರನ್ನು ಹಿಂಸೆಗೆ ಗುರಿ ಮಾಡಲಾಗಿತ್ತು ಎಂದಿದ್ದಾರೆ.

ಮಾಸಿಕ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿರುವ ಪ್ರಧಾನಿ, ತುರ್ತು ಪರಿಸ್ಥಿತಿ ಸಂದರ್ಭದಿಂದ ಭಾರತದ ಯುವ ಜನತೆ ಪ್ರಜಾಪ್ರಭುತ್ವ ಅರ್ಥ ಹಾಗೂ ಮಹತ್ವವನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

ಭಾರತ ಪ್ರಜಾಪ್ರಭುತ್ವದ ತಾಯಿಯಾಗಿದೆ. ನಾವು ಪ್ರಜಾಪ್ರಭುತ್ವದ ತತ್ವಗಳನ್ನು ಶ್ರೇಷ್ಠ ಎಂದು ಭಾವಿಸುತ್ತೇವೆ. ನಮ್ಮ ಸಂವಿಧಾನ ಸರ್ವೋಚ್ಚವಾಗಿದೆ ಎಂದರು.

ಜೂನ್ 25, 1975ರಂದು ತುರ್ತು ಪರಿಸ್ಥಿತಿ ಹೇರಲಾಗಿತ್ತು. ಇದು ಭಾರತದ ಇತಿಹಾಸದಲ್ಲಿ ಕರಾಳ ಅಧ್ಯಾಯ ಎಂದು ಮೋದಿ ಹೇಳಿದರು. ಲಕ್ಷಾಂತರ ಜನರು ತುರ್ತು ಪರಿಸ್ಥಿತಿಯನ್ನು ಪೂರ್ಣ ಬಲದಿಂದ ವಿರೋಧಿಸಿದರು. ಪ್ರಜಾಪ್ರಭುತ್ವದ ಬೆಂಬಲಿಗರನ್ನು ಆ ಸಮಯದಲ್ಲಿ ಹಿಂಸಿಸಲಾಗಿತ್ತು ಎಂದು ಪ್ರಧಾನಿ ತಿಳಿಸಿದರು.

ತುರ್ತು ಪರಿಸ್ಥಿತಿ ಸಮಯದಲ್ಲಿ ನಡೆದ ದೌರ್ಜನ್ಯಗಳ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆಯಲಾಗಿದೆ. ಈ ಬಗ್ಗೆ ನಾನೂ ಸಹ 'ಸಂಘರ್ಷ ಮೇ ಗುಜರಾತ್' ಎಂಬ ಪುಸ್ತಕ ಬರೆದಿದ್ದೆ ಎಂದು ಮೋದಿ ಸ್ಮರಿಸಿದರು. ಇತ್ತೀಚೆಗೆ ತುರ್ತು ಪರಿಸ್ಥಿತಿ ಕುರಿತಾದ 'ಟಾರ್ಚರ್ ಆಫ್ ಪೊಲಿಟಿಕಲ್ ಪ್ರಿಸನರ್ಸ್ ಇನ್ ಇಂಡಿಯಾ' ಎಂಬ ಪುಸ್ತಕ ನನ್ನ ಗಮನಕ್ಕೆ ಬಂತು. ಇದರಲ್ಲಿ ಪ್ರಜಾಪ್ರಭುತ್ವದ ಪರವಾಗಿರುವವರನ್ನು ಸರ್ಕಾರ ಪೀಡಿಸಿದ ಹಲವಾರು ಪ್ರಕರಣಗಳ ಅಧ್ಯಯನ ಇದೆ ಎಂದವರು ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ನಾವು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಡೆಸಲಾದ ಅಪರಾಧಗಳ ಬಗ್ಗೆಯೂ ಪರಿಗಣಿಸಬೇಕಿದೆ. ಇದರಿಂದ ಭಾರತದ ಯುವ ಪೀಳಿಗೆ ಪ್ರಜಾಪ್ರಭುತ್ವದ ಮಹತ್ವ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದವರು ಅಭಿಪ್ರಾಯ ಪಟ್ಟರು.

### ಅಪ್ಪ

ಓ ನನ್ನ ಅಪ್ಪನೇ
ಬದುಕಿಗೆ ಭರವಸೆ ನೀಡಿದ ನಾಯಕನೇ
ನೀ ಕಲಿಸಿದ ಶಿಸ್ತು .ಬದುಕನ್ನ ಬಂಗಾರ ಮಾಡಿತು
ನಾ ಶಾಲೆ ಬಿಟ್ಟು ಮನೆಯಲ್ಲಿ ಕೂತಾಗ
ಬಾರಿ ಕೋಲಿನಿಂದ ಬಾಸುಂಡೆ ಕೊಟ್ಟು
ಶಾಲೆಗೆ ಕಳಿಸಿ ಶಿಕ್ಷಣ ಕೊಡಿಸಿದ ಅಪ್ಪನೇ
ಶಿಕ್ಷಣದಿಂದ ಅಭಿಯಂತರ ನನ್ನಾಗಿ ಮಾಡಿ
ಜೀವನಕ್ಕೆ ದಾರಿ ದೀಪ ತೋರಿಸಿದ ದೇವರೇ
ಮೂವತ್ತೂರು ವರ್ಷ ಸರ್ಕಾರಿ ಕೆಲಸ ನಿರ್ವಹಿಸಿ
ರೈತರ ಮಿತ್ರರಾಗಿ ಹೊರಹೊಮ್ಮಿದ್ರ ಅಪ್ಪನೇ
ನಿನ್ನ ಶಿಸ್ತಿನ ಜೀವನ ನನಗೆ ಸ್ಫೂರ್ತಿ
ನನ್ನ ನೆಮ್ಮದಿಯ ಜೀವನವು ನೀನಿತ್ತ ದಾನ
ಅಪ್ಪ ನಿನಗೆ ಹೃದಯ ಪೂರ್ವಕ ಕೋಟಿ ನಮನ
ಅಪ್ಪಂದಿರ ದಿನದ ಶುಭಾಶಯಗಳೊಂದಿಗೆ

- **ಎಸ್.ಸಿದ್ದೇಶ್ ಕುರ್ಕಿ**, ದಾವಣಗೆರೆ.

### ಪಿತೃಭ್ಯೋ ನಮಃ

ಅಪ್ಪ ಎಂಬಿ ಎರಡಕ್ಷರದಲಿ.....
ಪ್ರೀತಿ, ಅಭಿಮಾನ,ಒಲವು ತುಂಬಿ
ಚಿಮ್ಮುವ ಕಾರಂಜಿಯ ರಸಬುಗ್ಗೆಯಂತೆ
ಸವಕಲು ಪದಗಳು ಆಗದಿರಲಿ ಅಂತೆ!!

ಕಿರು ಬೆರಳಿನಲ್ಲದು ಗಟ್ಟಿಯಲ್ಲಿ ಹಿಡಿದು
ಪುಟ್ಟ, ಪುಟ್ಟ ಹೆಜ್ಜೆಯಲ್ಲಿ ಮೆಲ್ಲನೆ ನಡೆದು
ಮಾಸದ ನೆನಪೆಂದು ಆ ಬೆರಳಿಗೆ....
ಭದ್ರತೆಯ ಭರವಸೆ ಹಿಡಿದ ಕರಗಳಿಗೆ!

ನೆನಪುಗಳ ಸರಮಾಲೆಯಲ್ಲಿಹ ಮಣಿಯಂತೆ
ಒತ್ತೊತ್ತಿ ಬರುತಿಹುದು ಚಿತ್ರ ಪಟದಂತೆ
ಅಪ್ಪನ ದಿನವಿಂದು ಒಂದೇ ದಿನವಲ್ಲಾ
ಎಂದೆಂದಿಗೂ ಇರುವುದು ನಮಗೆಲ್ಲಾ!

ಅಪ್ಪನ ಪರಿಶ್ರಮವದು ನಮ್ಮ ಏಳಿಗೆಗಾಗಿ
ಪರಿಪರಿಯಲ್ಲಿಹುದು ನಮ್ಮೆಲ್ಲರ ಬಾಳಿಗಾಗಿ....
ಕಳುಹಿಸಲಿಲ್ಲ ನಮ್ಮಪ್ಪ ಅವರಪ್ಪನನ್ನೆಲ್ಲಿಗೂ!!
ದೂಡದಿರೋಣ ನಮ್ಮಪ್ಪನನ್ನ ವೃದ್ಧಾಶ್ರಮದೆಡೆಗು!!

ಮೂರ್ದಿನದ ಬಾಳಿನಲಿ ಸುತ್ತುತ್ತಿದೆ ಚಕ್ರವು
ನ್ಯಾಯ, ನೀತಿ,ಸತ್ಯ, ಧರ್ಮದ ಪರಿಭ್ರಮಣದಲ್ಲಿ
ಕರ್ಮ ಫಲವು ನಮ್ಮ ಬೆನ್ನು ಹಿಂದೆ
ಬಂದೇ ಬರುವುದು ಇಂದಲ್ಲ ನಾಳೆ ಮುಂದೆ!!!

- **ವೀಣಾ ಕೃಷ್ಣಮೂರ್ತಿ**, ದಾವಣಗೆರೆ.

## ಹೆಬ್ಬಾಳ್ ಟೋಲ್‌ಗೇಟ್ ಬಳಿ ಲಾರಿ ಅಪಘಾತ: ಓರ್ವನ ಸಾವು

ದಾವಣಗೆರೆ, ಜೂ. 18- ಹೆಬ್ಬಾಳು ಟೋಲ್‌ಗೇಟ್ ಬಳಿ ನಿಂತಿದ್ದ ಲಾರಿಗೆ ಮತ್ತೊಂದು ಲಾರಿ ಢಿಕ್ಕಿಯಾಗಿ ಸ್ಥಳದಲ್ಲಿಯೇ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ.

ಬೆಂಗಳೂರು ದೊಮ್ಮಸಂದ್ರದ ಬೂರುಕುಂಟೆ ಗ್ರಾಮದ ವೆಂಕಟೇಶ್ (40) ಮೃತ ವ್ಯಕ್ತಿ. ಬೆಂಗಳೂರಿನಿಂದ ಗೋವಕ್ಕೆ ಕೋರಿಯರ್ ಲೋಡ್ ತುಂಬಿಕೊಂಡು ಹೋಗಿ ವಾಪಾಸ್ ಬೆಂಗಳೂರಿಗೆ ಹೋಗುವಾಗ ಈ ಅಪಘಾತವಾಗಿದೆ.

ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಹೊಸಹೊನ್ನತ್ತಿ : ಇಂದು ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು ತಾಲ್ಲೂಕಿನ 110 ಕೆವಿ ಹೊಸಹೊನ್ನತ್ತಿ ಉಪ-ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಫೀಡರ್‌ಗಳಿಗೆ ಹಾಗೂ 33 ಕೆವಿ ಮಾರ್ಗಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಅನೈತಿಕ ಸಂಬಂಧಕ್ಕೆ ಅಡ್ಡಿ: ಪತಿಯನ್ನು ಕೊಲೆ ಮಾಡಿದ್ದ ಪತ್ನಿಯ ಬಂಧನ

ದಾವಣಗೆರೆ, ಜೂ. 18- ಅಕ್ರಮ ಸಂಬಂಧಕ್ಕೆ ಅಡ್ಡಿಯಾದ ಪತಿಯನ್ನೇ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ನಿ ಹಾಗೂ ಆಕೆಯ ಸ್ನೇಹಿತನನ್ನು ಪೊಲೀಸರು ಬಂಧಿಸಿದ್ದಾರೆ. ಬೀರೇಶ (24) ಹಾಗೂ ಕಾವ್ಯ ಬಂಧಿತರು. ತನ್ನ ಪತ್ನಿ ಕಾವ್ಯ ಬೀರೇಶ ಎಂಬುವವನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡು ಓಡಿ ಹೋಗಿದ್ದಾರೆ ಎಂದು ಹದಡಿ ಠಾಣೆಯಲ್ಲಿ ಕಾವ್ಯಳ ಪತಿ ನಿಂಗರಾಜು ಇತ್ತೀಚೆಗೆ ದೂರು ನೀಡಿದ್ದರು. ಪೊಲೀಸರು ಕಾವ್ಯಳನ್ನು ಪತ್ತೆ ಮಾಡಿ ಪ್ರಕರಣವನ್ನು ಮುಕ್ತಾಯ ಗೊಳಿಸಿದ್ದರು. ಆದರೆ ನಿಂಗರಾಜನನ್ನು ಕೊಲೆ ಮಾಡಲಾಗಿದೆ ಎಂದು ತಾಯಿ ಶಿವಲಿಂಗಮ್ಮ ದೂರು ನೀಡಿದ್ದರು. ಈ ಪ್ರಕರಣದಲ್ಲಿ ಬೀರೇಶ ಹಾಗೂ ಕಾವ್ಯಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ತನಿಖೆ ನಡೆಸಿದಾಗ, ತಮ್ಮ ಅನೈತಿಕ ಸಂಬಂಧಕ್ಕೆ ನಿಂಗರಾಜನು ಅಡ್ಡಿ ಪಡಿಸುತ್ತಾನೆಂದು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ.

## ಮದ್ಯ ಮಾರಾಟ ಮಳಿಗೆಯಲ್ಲಿ ಕಳ್ಳತನ

ದಾವಣಗೆರೆ, ಜೂ. 18- ನಾಗನೂರು ಗ್ರಾಮದ ಎಂ.ಎಸ್.ಐ.ಎಲ್. ಮದ್ಯ ಮಾರಾಟ ಮಳಿಗೆಯಲ್ಲಿ ಕಳ್ಳತನವಾಗಿದ್ದು, 30030 ರೂ. ನಗದು, ಡಿವಿಆರ್, ಸಿಸಿ ಕ್ಯಾಮೆರಾ, ಮದ್ಯದ ಬಾಟಲಿಗಳನ್ನು ಕಳ್ಳರು ದೋಚಿದ್ದಾರೆ. ಹದಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

**ವಾಸದ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಟೈಯರ್ ಡ್ಯೂ ಪ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು, ಹಾಗೂ ಎಲ್ಲಾ ಸೌಕರ್ಯವಿರುವ ವಾಸದ ಮನೆ ಭೋಗ್ಯಕ್ಕಿದೆ. ಬಿ.ಎಸ್. ಸಂತೋಷ್
96322 67555

**ತಕ್ಷಣ ಬೇಕಾಗಿದ್ದಾರೆ**
ಡಿಟಿಡಿಸಿ ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹಾಗೂ ಬೈಕ್ ಇರುವ ಹುಡುಗರು ಬೇಕಾಗಿದ್ದಾರೆ.
ಮೊ.97385-23711

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಹತ್ತಿರ ರಶ್ಮಿ ಹಾಸ್ಟೆಲ್ ಹಿಂಭಾಗ 30x40 ಪೂರ್ವ, ಬಸವೇಶ್ವರ ಲೇಔಟ್‌ನಲ್ಲಿ 40x60 ಪೂರ್ವ, GMIT ಕಾಲೇಜ್ ಹಿಂಭಾಗ 30x40 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕೆಲಸದವರು ಬೇಕಾಗಿದ್ದಾರೆ**
ಮನೆ ಕೆಲಸ ಮತ್ತು ಮಗುವಿನ ಬಾಣಂತನ ಮಾಡಲು ಕೆಲಸದವರು ಬೇಕಾಗಿದ್ದಾರೆ. ತಿಂಗಳಿಗೆ 6 ರಿಂದ 8 ಸಾವಿರ ಸಂಬಳ 3 ಹೊತ್ತಿನ ಊಟ ಮತ್ತು ವಸತಿ. ದಾವಣಗೆರೆ ಹೊಸ ಕೋರ್ಟ್ ಹತ್ತಿರ. ಸಂಪರ್ಕಿಸಿ.
96201 64304

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿ 20x48 West, 20x30 East, 30x40 West, 30x50 East, 40x60 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**EC / ಇಸಿ, E-swathu, Khatha Change Building Licence & Other Property Documents**
96118-66449

**ಹಾಲ್ ಬಾಡಿಗೆಗೆ ಇದೆ**
ಮಾಮಾಸ್ ಜಾಯಿಂಟ್ ರಸ್ತೆಯಲ್ಲಿರುವ ಶಿಲ್ಪ ಡಯಾಗ್ನಸ್ಟಿಕ್ಸ್ ಪಕ್ಕದಲ್ಲಿರುವ ಶ್ವೇತ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿ ಹಾಲ್ ಬಾಡಿಗೆಗೆ ಇದೆ.
98440 65638

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
2 ಕೆಜಿ ಪ್ಲಾಸ್ಟಿಕ್ ಕವರ್ ರೂ. 30/-
88920 08800

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸೈಟುಗಳು ಮಾರಾಟಕ್ಕಿವೆ**
ಶನೇಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40-30x40 East, 60x40 East, 30x40 East.
Rate : 2250/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ದಕ್ಷಿಣ ಭಾರತ ಶೈಲಿಯ ತಿಂಡಿ ಮಾಡಲು ಅನುಭವಿ ಭಟ್ಟರು ಕೆಲಸಕ್ಕೆ ಬೇಕಾಗಿದ್ದಾರೆ.
95388 96927

**ಬಾಡಿಗೆಗೆ / ಲೀಸ್‌ಗೆ ಇದೆ**
ಡೋರ್ ನಂ. 1638/9 ತರಳಬಾಳು ಬಡಾವಣೆ 16ನೇ ಮೇನ್, ಎರಡನೇ ತಿರುವು ಡಬಲ್ ಬೆಡ್ ರೂಂ ಇರುವ ಮನೆ ಬಾಡಿಗೆಗೆ / ಲೀಸ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
99000 94783, 96117 05680

**ಬೇಕಾಗಿದ್ದಾರೆ**
TVS, ಬಿಸ್ಕೆಟ್ಸ್, ಹಾರ್ಲಿಕ್ಸ್, Toyota, Honda, ಕಂಪನಿಗಳಿಗೆ, ಆಫೀಸ್‌ಗಳಿಗೆ 7th, 10th, PUC, Degree, ITI, Diploma ಆದವರು ಬೇಕಾಗಿದ್ದಾರೆ.
ಸಂಬಳ 16,000/- ರಿಂದ 40,000/- ವಸತಿ, ಊಟವಿದೆ.
ಸ್ಥಳ : ದಾವಣಗೆರೆ ಮತ್ತು ಬೆಂಗಳೂರು.
90355 20339

**SSLC/PUC ಪಾಸ್ / ಫೇಲ್ ಮುಂದೇನು..?**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್- 2 ವರ್ಷ.
ವಿದ್ಯಾರ್ಹತೆ: SSLC/PUC Pass/Fail.
ನೇರ ಪರೀಕ್ಷೆಗಳು : PUC : ARTS / COMM/SCIENCE.
ಸಂಪರ್ಕಿಸಿ: ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಲಾಯರ್ ರಸ್ತೆ. ದಾವಣಗೆರೆ.
86602 35013

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**WANTED PHARMASIST**
CONTACT :
SHILPA DIAGNOSTICS PVT LTD.,
MCC B BLOCK, NEAR SWIMMING POOL, DAVANGERE.
98440 65638

**ಬಾಡಿಗೆಗೆ ಇದೆ**
ಶಾಮನೂರು ರಸ್ತೆಯ ಜಿ.ಕೆ. ಕಾಂಪ್ಲೆಕ್ಸ್‌ನಲ್ಲಿ ಎಂ.ಆರ್.ಎಫ್ ಟೈರ್ ಶೋ ರೂಂ ಮೇಲೆ, ಮೊದಲ ಮಹಡಿಯಲ್ಲಿ 1700 ಚದರಡಿ ಜಾಗ ವಾಣಿಜ್ಯ ಉದ್ದೇಶಕ್ಕೆ ಬಾಡಿಗೆಗೆ ಇದೆ.
98459 27003, 99165 16783

**ಬೇಕಾಗಿದ್ದಾರೆ**
ಪಿಯುಸಿ, ಡಿಗ್ರಿ ಆದ ಮಹಿಳೆಯರು ರ್‍ಯಾಕ್‌ನಿಂದ ಸ್ಟಾಕ್ ತೆಗೆಯಲು ಔಷಧಿ ಅಂಗಡಿಗೆ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಸಮಯ ಸಂಜೆ : 6.30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
# 579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
4 ನೇ ಮೇನ್, 7ನೇ ಕ್ರಾಸ್, ಎಸ್. ಎಸ್. ಲೇಔಟ್ 'ಬಿ' ಬ್ಲಾಕ್ ದಾವಣಗೆರೆಯ ಮನೆಯಲ್ಲಿ VEG & NON-VEG ಅಡುಗೆ ಮಾಡುವ ಸ್ತ್ರೀಯರು ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 7.45ರಿಂದ ಮಧ್ಯಾಹ್ನ 2.30ರವರೆಗೆ.
ಅಡುಗೆ ಮಾಡಲು ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ.
ವಯಸ್ಸು : 45 ವರ್ಷ ಮೀರಿರಬಾರದು.
ಮೊ : 99459 88776

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಯುವಕ-ಯುವತಿಯರಿಗೆ ಒಂದು ಸದಾವಕಾಶ
ವಯೋಮಿತಿ : 20-35 ವರ್ಷ
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.
ಕೆಲಸದ ವಿವರ : ಚಿಕಿತ್ಸಾ ವಿಭಾಗಕ್ಕೆ ಥೆರಪಿಸ್ಟ್
(45 ದಿನಗಳ ಟ್ರೈನಿಂಗ್ ಉಚಿತವಾಗಿ ಕೊಟ್ಟು, ತದನಂತರ ನಮ್ಮಲ್ಲೆ ಸರ್ಟಿಫಿಕೇಟ್ ಕೊಟ್ಟು, ಸಂಬಳ ನೀಡಲಾಗುವುದು)
ಹೆಚ್ಚಿನ ಮಾಹಿತಿಗಾಗಿ
8618642929, 08192-252228

**ನಮ್ಮಲ್ಲಿ ಯೋಗ್ಯ ತಳಿಯ ಅಡಿಕೆ ಸಸಿಗಳು ದೊರೆಯುತ್ತವೆ. ಬೇಕಾದಲ್ಲಿ ಸಂಪರ್ಕಿಸಿ. :**
98441 22269, 86182 17245

**TO-LET**
Office Use Only or 12=21 sqft first floor, Vasantha Road, Beside Basavanagara Police Station, Davangere.
94486 97994
08192 257608

**ಬೇಕಾಗಿದ್ದಾರೆ**
S.V MARKETING Dvg
P.B.Road (Harihar Road)
TATA ACE DRIVER (ಟಾಟಾ ಏಸಿ ಡ್ರೈವರ್)
94480 46571, 78993 37571

**ಬಾಡಿಗೆಗೆ ಇದೆ**
ಶ್ರೀ ವಿನಯ್ ಎಂಟರ್ ಪ್ರೈಸಸ್‌ರವರ ಮೊದಲನೇಯ 20x100 ಮಹಡಿ (1ನೇ ಫ್ಲೋರ್) ಬಾಡಿಗೆಗೆ ಇದೆ. ವಿಚಾರಿಸಿರಿ. ವಿಳಾಸ : RMC ರೋಡ್, ಬಂಬೂ ಬಜಾರ್, ಹೆಚ್.ಪಿ. ಪೆಟ್ರೋಲ್ ಬಂಕ್ ಪಕ್ಕ, ದಾವಣಗೆರೆ.
94486 67685, 88926 81923

**TEACHERS WANTED**
B.A, B.Ed., or M.A., B.Ed., Social Science (Urdu Medium)
ANJUM COMPOSITE HIGH SCHOOL
Bhagath Singh Nagara, Davanagere. Apply or Attend immediately to above address.

**JOB REQUIRMENTS**
* Nursing tutor - BSc., Nursing or MSc Nursing
* Computer operator
* Librarian
Sanjeevini College
Anjaneya Badavane Davanagere
08192-220611,9743073102

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸುಕ್ಷೇತ್ರ ಗಾಣಗಟ್ಟಿ ಶ್ರೀ ಮಾಯಮ್ಮ ದೇವಿ ಜ್ಯೋತಿಷ್ಯಾಲಯ**
ಇವರು ನುಡಿದಂತೆ ನಡೆಯುವರು
ಪಂಡಿತ್ ಭರತ್ ಭಟ್- 81232 83279
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಲೈಂಗಿಕ ಸಮಸ್ಯೆ, ಮಾಟ, ಮಂತ್ರ, ಸಂತಾನ, ವಶೀಕರಣ, ಆರೋಗ್ಯ ಇನ್ನೂ ನಿಮ್ಮ ಯಾವುದೇ ಸಮಸ್ಯೆಗೆ 3 ದಿನಗಳಲ್ಲಿ ಪರಿಹಾರ. ಪರಿಹಾರ ಸಿಗದಿದ್ದಲ್ಲಿ ಹಣ ವಾಪಾಸ್ ನೀಡಲಾಗುವುದು.
ವಿಳಾಸ : ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.

**CHIRNAJIVI ACADEMY**
IBPS, RRB Crash Course new Batch Starts on 15th June. Admissions started.
94900 00406, 63014 53621

**ಡ್ರೈವರ್ ಬೇಕಾಗಿದ್ದಾರೆ**
Logistic ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಬೇಕಾಗಿದ್ದಾರೆ. ಆಸಕ್ತಿ ಇರುವವರು ಕೂಡಲೇ ಸಂಪರ್ಕಿಸಿ :
91139 65957, 97411 60172

**WANTED HELPERS**
for reputed Plywood ware house in APMC YARD, DAVANGERE.
Contact :
94477 23005

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ
ಲಾಯರ್ ರಸ್ತೆ, ದಾವಣಗೆರೆ.
9740064163

# ಅಭಿರುಚಿ, ಆಸಕ್ತಿಗಳು ಜೀವನದಲ್ಲಿ ಯಶಸ್ಸು ತರುತ್ತವೆ

## ಭದ್ರಾ ಪದವಿ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಹೆಚ್. ಕೆ. ಲಿಂಗರಾಜು



ದಾವಣಗೆರೆ,ಜೂ.18- ಭದ್ರಾ ಪದವಿ ಕಾಲೇಜು ಹಾಗೂ ಭದ್ರಾ ಸ್ನಾತಕೋತ್ತರ ಕೇಂದ್ರದ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಸಮಾರೋಪ ಸಮಾರಂಭವು ನಗರದ ಕನ್ನಡ ಕುವೆಂಪು ಭವನದಲ್ಲಿ ಮೊನ್ನೆ ನಡೆಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಿಕ್ಷಣ ಇಲಾಖೆ, ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ. ಲಿಂಗರಾಜು ಮಾತನಾಡಿ, ವಿದ್ಯಾಸಂಸ್ಥೆಗಳ ತವರೂರಾಗಿ ಬೆಳೆಯು ತ್ತಿರುವ ದಾವಣಗೆರೆಯಲ್ಲಿ ಭದ್ರಾ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಯ ಹೆಜ್ಜೆಯನ್ನು ಇಡುತ್ತಿದೆ. ಜಗತ್ತಿನ ಶಕ್ತಿಶಾಲಿ ರಾಷ್ಟ್ರವಾಗಿ ಬೆಳೆಯುತ್ತಿರುವ ಭಾರತದಲ್ಲಿ ಯುವ ವಿದ್ಯಾರ್ಥಿಗಳ ಪಾತ್ರ ದೊಡ್ಡದಾಗಿದೆ ಎಂದರು.

ಪರಿಶ್ರಮವಿಲ್ಲದೆ ಯಶಸ್ಸು ಗಳಿಸಲು ಅಸಾಧ್ಯ. ಹಾಗಾಗಿ ತಮ್ಮ ಉತ್ತಮ ಭವಿಷ್ಯದ ಬಗ್ಗೆ ಕನಸು ಕಾಣಬೇಕು. ಆ ಕನಸುಗಳನ್ನು ಹುಡುಕಿ, ಅರಸಿಕೊಂಡು ಹೋಗಬೇಕು, ಗುರಿಗಳನ್ನು ತಲುಪಬೇಕು. ನಿಮ್ಮೊಳಗಿನ ಜ್ಞಾನ, ಕೌಶಲ್ಯ, ಅಭಿರುಚಿ, ಆಸಕ್ತಿಗಳು ನಿಮ್ಮ ಜೀವನದಲ್ಲಿ ಯಶಸ್ಸು ತಂದುಕೊಡುತ್ತವೆ. ಯುವಕರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು. ಸಾಧನೆಯ ಹಾದಿಯಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆ ಇರಬೇಕು. ನಡೆ-ನುಡಿ ಸಂಸ್ಕೃತಿ, ಪರಂಪರೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ. ಇವುಗಳನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ಯುವ ವಿದ್ಯಾರ್ಥಿಗಳ ಮೇಲಿದೆ ಎಂದು ಲಿಂಗರಾಜು ಹೇಳಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ. ಹೆಚ್. ಮುರಿಗೇಂದ್ರಪ್ಪ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸೃಜನಶೀಲ ಮನೋಭಾವನೆ ಅತ್ಯವಶ್ಯಕ. ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗುವುದನ್ನು ಬಿಟ್ಟು, ಅವುಗಳಿಂದ ಹೊರ ಬಂದು ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳಬೇಕು. ಪ್ರತಿದಿನ ದಿನ ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ಓದುವುದರ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗಬೇಕು ಎಂದು ಕರೆ ನೀಡಿದರು.

ಪ್ರಾಂಶುಪಾಲ ಪ್ರೊ. ಟಿ. ಮುರುಗೇಶ್ ಅಧ್ಯಕ್ಷತೆ ವಹಿಸಿದ್ದರು. ಮ್ಯಾನೇಜಿಗ್ ಟ್ರಸ್ಟಿ ಎಂ.ಸಂಕೇತ್ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಕು. ಸಂಜಯ್‌ಕುಮಾರ್ ಸ್ವಾಗತಿ ಸಿದರೆ, ಉಪನ್ಯಾಸಕ ಬಸವನಗೌಡ ಆರ್ .ಕೆ., ವಾರ್ಷಿಕ ವರದಿ ಓದಿದರು, ಕು. ಕಾವ್ಯ ಕೆ. ಆರ್. ಮತ್ತು ಪೂರ್ಣಿಮ ವಿ. ವೈ. ನಿರೂಪಿಸಿ ದರು. ಕು. ರಂಜಿತಾ ಎನ್. ಆರ್. ವಂದಿಸಿದರು.

# ಅತಿ ವಿಶ್ವಾಸದಿಂದ ಮುಗ್ಗರಿಸುವ ಅಪಾಯ

## ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಜಿಪಂ ಸಿಇಒ ಸುರೇಶ್ ಇಟ್ನಾಳ್ ಎಚ್ಚರಿಕೆ



ದಾವಣಗೆರೆ, ಜೂ. 18 – ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ಉತ್ತಮ ಫಲಿತಾಂಶ ಪಡೆದವರು ಅತಿ ವಿಶ್ವಾಸ ಹೊಂದಿದರೆ ಮುಗ್ಗರಿಸುವ ಅಪಾಯ ಇದೆ ಎಂದು ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಎಚ್ಚರಿಸಿದ್ದಾರೆ.

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಯಲ್ಲಿ ಹೆಚ್ಚಿನ ಅಂಕ ಗಳಿಸಿದ ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದ ಷೇರುದಾರರ ಮಕ್ಕಳಿಗೆ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ನಗರದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಬೆಳಿಗ್ಗೆ ಕಾರ್ಯಕ್ರಮ ನೆರವೇರಿತು.

ಶಾಲಾ - ಕಾಲೇಜು ಹಂತದಲ್ಲಿ ಹೆಚ್ಚು ಅಂಕ ಗಳಿಸುವುದು ಒಂದು ಮೆಟ್ಟಿಲು ಮಾತ್ರ. ಇನ್ನೂ ಸಾಕಷ್ಟು ಮೆಟ್ಟಿಲುಗಳನ್ನು ಕ್ರಮಿಸಬೇಕಿದೆ. ಈಗಿನಂತೆ ನಿರಂತರ ಪರಿಶ್ರಮಿಗಳಾದಾಗ ಮಾತ್ರ ಯಶಸ್ಸು ಸಿಗಲು ಸಾಧ್ಯ ಎಂದವರು ಹೇಳಿದರು.

ಪ್ರತಿಭೆ ಅಂದರೆ ಕೇವಲ ಅಂಕಗಳಷ್ಟೇ ಅಲ್ಲ. ಕ್ರೀಡೆ, ಸಾಹಿತ್ಯ, ಸಂಗೀತ ಮುಂತಾದ ವಲಯ ಗಳಲ್ಲೂ ಪ್ರತಿಭೆಗಳಿರುತ್ತವೆ. ಎಲ್ಲ ವಲಯಗಳಲ್ಲಿ ಸಾಧನೆಗೆ ಅವಕಾಶ ಇದೆ ಎಂದವರು ಹೇಳಿದರು.

ಶಿಕ್ಷಣಾಧಿಕಾರಿ ಜಿ.ಎಸ್. ರಾಜಶೇಖರ್ ಮಾತನಾಡಿ, ಎಲ್ಲ ಪೋಷಕರು ದೂರಾಲೋಚನೆ ಯಿಂದ ಮಕ್ಕಳ ಅಭಿವೃದ್ಧಿ ಬಯಸುತ್ತಾರೆ. ಪೋಷಕರ ಶ್ರಮ ಮಕ್ಕಳಿಗೆ ಸ್ಫೂರ್ತಿ ಆಗಬೇಕು. ಯಾವುದೇ ಹುದ್ದೆಗೆ ಹೋದರೂ ನಿಷ್ಠೆಯಿಂದ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಬಿ. ಪಾಲಾಕ್ಷಿ, ಜಿಲ್ಲೆಯಲ್ಲಿ 6-8 ಸಾವಿರ ವೀರಶೈವ ಲಿಂಗಾಯತ ಸಮುದಾಯದ ನೌಕರರಿದ್ದಾರೆ. ಆದರೆ, ಪತ್ತಿನ ಸಂಘದಲ್ಲಿ ಕೇವಲ 651 ಸದಸ್ಯರಿದ್ದಾರೆ. ಸದಸ್ಯತ್ವ ಹೆಚ್ಚಾಗಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಲೋಕಣ್ಣ ಮಾಗೋಡ್ರ ವಹಿಸಿದ್ದರು.

ಈ ಸಂದರ್ಭದಲ್ಲಿ ಪತ್ತಿನ ಸಂಘದ ಸಂಸ್ಥಾಪಕ ಅಧ್ಯಕ್ಷ ಕೆ. ಶಿವಶಂಕರ್, ನಿಕಟಪೂರ್ವ ಅಧ್ಯಕ್ಷ ಎನ್.ಇ. ನಟರಾಜ್, ಉಪಾಧ್ಯಕ್ಷ ಬಿ.ಕೆ. ನಾಗರಾಜ್, ವಿಶೇಷ ಆಹ್ವಾನಿತ ಎ.ಆರ್. ಉಜ್ಜನಪ್ಪ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾಗನೂರು ಪಬ್ಲಿಕ್ ಟ್ರಸ್ಟ್ ನಿರ್ದೇಶಕ ಎಸ್. ಆರ್. ಸಿರಗುಂಬಿ, ಕೃಷಿ ಇಲಾಖೆ ಉಪ ನಿರ್ದೇಶಕ ಆರ್. ತಿಪ್ಪೇಸ್ವಾಮಿ, ತಾಲ್ಲೂಕು ಪಂಚಾಯ್ತಿ ಸಿಇಒ ಆನಂದ್, ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಬಿ.ಕೆ. ನಾಗರಾಜ್, ನಿರ್ದೇಶಕರಾದ ಎಂ. ಸಿದ್ದೇಶ್, ವಿ.ಎನ್. ವೀರಣ್ಣ, ಬಿ.ಬಿ. ವಿಶಾಲಾಕ್ಷಮ್ಮಮತ್ತಿತರರು ಉಪಸ್ಥಿತರಿದ್ದರು.

ಗೌರಿ ನೃತ್ಯ ಪ್ರದರ್ಶನ ನೀಡಿದರು. ಬಿ.ಟಿ. ಪ್ರಕಾಶ್ ಪ್ರಾರ್ಥಿಸಿದರು.

# ಮೊದಲ ದಿನವೇ ಎಡವಿದ ಗೃಹ ಜ್ಯೋತಿ ಸರ್ವರ್



ದಾವಣಗೆರೆ, ಜೂ. 18 – ಗೃಹ ಜ್ಯೋತಿ ಯೋಜನೆಯಡಿ 200 ಯುನಿಟ್‌ಗಳವರೆಗೆ ಉಚಿತ ವಿದ್ಯುತ್ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸ್ವೀಕಾರದ ಮೊದಲ ದಿನವೇ ಸರ್ವರ್ ಸಮಸ್ಯೆ ಕಾಡಿತು.

ಬೆಳಿಗ್ಗೆ 11 ಗಂಟೆಯಿಂದ ಸೇವಾಸಿಂಧು ವೆಬ್ ತಾಣದ ಮೂಲಕ ಅರ್ಜಿ ಸ್ವೀಕರಿಸುವುದಾಗಿ ತಿಳಿಸಲಾಗಿತ್ತು. ಆದರೆ, ಮಧ್ಯಾಹ್ನ 12.30ರ ನಂತರವೇ ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ದಾವಣಗೆರೆ ಒನ್ ಕೇಂದ್ರಗಳಲ್ಲಿ ಅರ್ಜಿ ಸ್ವೀಕಾರ ಸಾಧ್ಯವಾಯಿತು ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ, ಪಿ.ಜೆ. ಬಡಾವಣೆಯ ಸೂಪರ್‌ಮಾರ್ಕೆಟ್ ಸೇರಿದಂತೆ ಹಲವಾರು ಕೇಂದ್ರಗಳಲ್ಲಿ ವೆಬ್ ಸೈಟ್ ಕಾರ್ಯನಿರ್ವಹಿಸುತ್ತಿಲ್ಲ ಎಂದು ಜನರಿಗೆ ಹೇಳಿ ವಾಪಸ್ ಕಳಿಸುತ್ತಿರುವುದು ಕಂಡು ಬಂತು. ಅರ್ಜಿ ಸಲ್ಲಿಸಲು ಬಂದವರು ಈ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದುದು ಕಂಡು ಬಂತು.

https://sevasindhugs.karnataka.gov.in/ ವೆಬ್ ತಾಣದಲ್ಲಿ ಸಾರ್ವಜನಿಕರು ಮಧ್ಯಾಹ್ನ 3 ಗಂಟೆ ನಂತರ ಅರ್ಜಿ ಸಲ್ಲಿಸಬಹುದು ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಆದರೆ, ಸಂಜೆ 6 ಗಂಟೆ ನಂತರ ಈ ವೆಬ್ ತಾಣದ ಕಾರ್ಯನಿರ್ವಹಣೆ ಆರಂಭವಾಯಿತು. ಆನಂತರವೂ ಸರ್ವರ್ ಸಮಸ್ಯೆ ಕಾಡುತ್ತಲೇ ಇತ್ತು. ಬೆಸ್ಕಾಂ ಸಹಾಯವಾಣಿಯಾದ 1912 ಸಹ ಸಾಕಷ್ಟು ಬ್ಯುಸಿ ಆಗಿದ್ದುದು ಕಂಡು ಬಂತು.

ದಿನವಿಡೀ ವೆಬ್ ತಾಣ ಸಮರ್ಪಕವಾಗಿ ಕಾರ್ಯನಿರ್ವಹಿಸದ ಕಾರಣ ಮೊದಲ ದಿನ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಕಡಿಮೆ ಇತ್ತು. ಮೊದಲ ದಿನ ಸಂಜೆ 6ರವರೆಗೆ ಜಿಲ್ಲೆಯಲ್ಲಿ 6908 ಅರ್ಜಿಗಳು ಸಲ್ಲಿಕೆಯಾಗಿವೆ. ರಾಜ್ಯದಲ್ಲಿ 55 ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ.

ಅರ್ಜಿ ಸಲ್ಲಿಸಲು ಆಧಾರ್ ಸಂಖ್ಯೆ, ವಿದ್ಯುತ್ ಬಿಲ್‌ನಲ್ಲಿ ನೀಡಲಾದ ವಿದ್ಯುತ್ ಖಾತೆ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆ ನಮೂದಿಸಬೇಕಿದೆ.

**ಸಿಗದ ಸ್ಪಷ್ಟನೆ :** ಪ್ರಸಕ್ತ ವೆಬ್ ಸೈಟ್ ಮೂಲಕ ಗ್ರಾಹಕರ ವಿದ್ಯುತ್ ಖಾತೆ ಸಂಖ್ಯೆ, ಆಧಾರ್ ಹಾಗೂ ಮೊಬೈಲ್ ಮಾಹಿತಿ ಮಾತ್ರ ಪಡೆಯಲಾಗುತ್ತಿದೆ. ಮಾಲೀಕತ್ವದ ದಾಖಲೆ ಇಲ್ಲವೇ ಬಾಡಿಗೆ ಕರಾರು ಪತ್ರದ ದಾಖಲೆಗಳನ್ನು ಪಡೆಯುತ್ತಿಲ್ಲ. ಹೀಗಾಗಿ ಈ ದಾಖಲೆಗಳ ಸಲ್ಲಿಕೆ ಹಾಗೂ ಪರಿಶೀಲನೆ ಯಾವ ರೀತಿ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಹೇಳಿದ್ದಾರೆ.

ಹಲವರು ಮನೆ ಖರೀದಿಸಿದ ನಂತರವೂ ಹಿಂದಿನ ಮಾಲೀಕರ ಹೆಸರಿನಲ್ಲೇ ಬಿಲ್ ಕಟ್ಟುತ್ತಿದ್ದಾರೆ. ಇನ್ನು ಕೆಲವರ ಖಾತೆಗಳು ತಂದೆ ಇಲ್ಲವೇ ತಾತನ ಹೆಸರಿನಲ್ಲಿವೆ. ಅವರು ಮೃತಪಟ್ಟ ನಂತರವೂ ವಿದ್ಯುತ್ ಖಾತೆಯನ್ನು ವರ್ಗಾಯಿಸಿಕೊಂಡಿಲ್ಲ.

ಒಂದೇ ನಿವೇಶನವನ್ನು ಕುಟುಂಬದವರು ಬೇರೆ ಬೇರೆ ಮನೆಯಾಗಿ ವಿಭಜಿಸಿಕೊಂಡಿದ್ದಾರೆ. ಈ ಎಲ್ಲ ವಿಷಯಗಳ ಬಗ್ಗೆ ಇನ್ನೂ ಸ್ಪಷ್ಟನೆ ಸಿಗಬೇಕಿದೆ ಎಂದವರು ಹೇಳಿದ್ದಾರೆ.

ಇನ್ನು ಕೆಲವರ ಹೆಸರುಗಳು ಆಧಾರ್ ಕಾರ್ಡ್‌ನಲ್ಲಿ ಒಂದು ರೀತಿ ಹಾಗೂ ವಿದ್ಯುತ್ ಖಾತೆಗಳಲ್ಲಿ ಮತ್ತೊಂದು ರೀತಿ ಇದೆ. ಈ ಎಲ್ಲ ವಿಷಯಗಳು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಬೇಕಿದೆ.

# ಹರಪನಹಳ್ಳಿ ತಾ.ಗ್ರಾ.ಪಂ.ಗಳ ಅಧ್ಯಕ್ಷ- ಉಪಾಧ್ಯಕ್ಷರ ಮೀಸಲಾತಿ ನಿಗದಿ



ಹರಪನಹಳ್ಳಿ, ಜೂ.18- ತಾಲ್ಲೂಕಿನ 37 ಗ್ರಾಮ ಪಂಚಾಯ್ತಿಗಳ ಎರಡನೇ ಹಂತದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಮೀಸಲಾತಿಯನ್ನು ಶನಿವಾರ ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ವಿಜಯನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಜಿ.ಅನುರಾಧ ಅವರ ಅಧ್ಯಕ್ಷತೆಯಲ್ಲಿ ನಿಗದಿ ಪಡಿಸಲಾಯಿತು.

ಮತ್ತಿಹಳ್ಳಿ : ಎಸ್ಟಿ(ಅಧ್ಯಕ್ಷ), ಸಾಮಾನ್ಯ ಮಹಿಳೆ (ಉಪಾಧ್ಯಕ್ಷ), ಸಾಸ್ವಿಹಳ್ಳಿ : ಸಾಮಾನ್ಯ ಮಹಿಳೆ (ಅಧ್ಯಕ್ಷ), ಎಸ್ಟಿ(ಉಪಾಧ್ಯಕ್ಷ), ನಿಚ್ಚವನಹಳ್ಳಿ : ಸಾಮಾನ್ಯ (ಅಧ್ಯಕ್ಷ) ಎಸ್ಸಿ ಮಹಿಳೆ (ಉಪಾಧ್ಯಕ್ಷ), ಕಡಬಗೇರಿ : ಸಾಮಾನ್ಯ(ಅಧ್ಯಕ್ಷ) ಎಸ್ಟಿ ಮಹಿಳೆ (ಉಪಾಧ್ಯಕ್ಷ), ಮೈದೂರು : ಸಾಮಾನ್ಯ ಮಹಿಳೆ (ಅಧ್ಯಕ್ಷ) ಎಸ್ಟಿ (ಉಪಾಧ್ಯಕ್ಷ), ಚಿಗಟೇರಿ : ಎಸ್ಟಿ(ಅಧ್ಯಕ್ಷ), ಸಾಮಾನ್ಯ ಮಹಿಳೆ (ಉಪಾಧ್ಯಕ್ಷ), ಅಡವಿಹಳ್ಳಿ : ಸಾಮಾನ್ಯ ಮಹಿಳೆ (ಅಧ್ಯಕ್ಷ), ಎಸ್ಸಿ (ಉಪಾಧ್ಯಕ್ಷ), ಬೆಣ್ಣಿಹಳ್ಳಿ : ಸಾಮಾನ್ಯ (ಅಧ್ಯಕ್ಷ), ಸಾಮಾನ್ಯ ಮಹಿಳೆ (ಉಪಾಧ್ಯಕ್ಷ), ನಂದಿಬೇವೂರು : ಎಸ್ಸಿ ಮಹಿಳೆ (ಅಧ್ಯಕ್ಷ), ಸಾಮಾನ್ಯ (ಉಪಾಧ್ಯಕ್ಷರು), ಬಾಗಳಿ : ಸಾಮಾನ್ಯ ಮಹಿಳೆ (ಅಧ್ಯಕ್ಷ), ಎಸ್ಟಿ ಮಹಿಳೆ (ಉಪಾಧ್ಯಕ್ಷರು).

ಮಾಡಲಗೇರಿ : ಎಸ್ಸಿ(ಅಧ್ಯಕ್ಷ), ಸಾಮಾನ್ಯ ಮಹಿಳೆ (ಉಪಾಧ್ಯಕ್ಷರು), ಕೂಲಹಳ್ಳಿ : ಸಾಮಾನ್ಯ ಮಹಿಳೆ (ಅಧ್ಯಕ್ಷ), ಎಸ್ಟಿ ಮಹಿಳೆ (ಉಪಾಧ್ಯಕ್ಷರು), ತೊಗರಿಕಟ್ಟೆ : ಎಸ್ಸಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ನೀಲಗುಂದ : ಎಸ್ಟಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ಕೆ.ಕಲ್ಲಹಳ್ಳಿ : ಸಾಮಾನ್ಯ ಮಹಿಳೆ (ಅಧ್ಯಕ್ಷರು), ಎಸ್ಸಿ (ಉಪಾಧ್ಯಕ್ಷರು), ಕುಂಚೂರು : ಸಾಮಾನ್ಯ (ಅಧ್ಯಕ್ಷರು), ಎಸ್ಸಿ ಮಹಿಳೆ (ಉಪಾಧ್ಯಕ್ಷರು), ನಿಟ್ಟೂರು : ಸಾಮಾನ್ಯ (ಅಧ್ಯಕ್ಷರು), ಎಸ್ಸಿ (ಉಪಾಧ್ಯಕ್ಷರು), ಚಿರಸ್ಥಹಳ್ಳಿ : ಎಸ್ಸಿ (ಅಧ್ಯಕ್ಷರು), ಸಾಮಾನ್ಯ ಮಹಿಳೆ (ಉಪಾಧ್ಯಕ್ಷರು). ಯಡಿಹಳ್ಳಿ : ಸಾಮಾನ್ಯ (ಅಧ್ಯಕ್ಷರು), ಎಸ್ಸಿ ಮಹಿಳೆ (ಉಪಾಧ್ಯಕ್ಷರು), ಹಲುವಾಗಲು : ಎಸ್ಸಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು).

ತೆಲಿಗಿ : ಸಾಮಾನ್ಯ ಮಹಿಳೆ (ಅಧ್ಯಕ್ಷರು), ಎಸ್ಸಿ (ಉಪಾಧ್ಯಕ್ಷರು), ದುಗ್ಗಾವತ್ತಿ : ಎಸ್ಟಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ಕಡತಿ : ಸಾಮಾನ್ಯ ಮಹಿಳೆ (ಅಧ್ಯಕ್ಷರು), ಎಸ್ಸಿ (ಉಪಾಧ್ಯಕ್ಷರು).

ರಾಗಿಮಸಲವಾಡ : ಎಸ್ಸಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪ್ಯಾಧ್ಯಕ್ಷರು), ಕಂಚಿಕೇರಿ : ಎಸ್ಸಿ (ಅಧ್ಯಕ್ಷರು), ಸಾಮಾನ್ಯ ಮಹಿಳೆ (ಉಪಾಧ್ಯಕ್ಷರು), ಹಿರೇಮೇಗಳಗೇರಿ : ಎಸ್ಟಿ(ಅಧ್ಯಕ್ಷರು), ಸಾಮಾನ್ಯ ಮಹಿಳೆ (ಉಪಾಧ್ಯಕ್ಷರು), ಲಕ್ಷ್ಮಿಪುರ : ಸಾಮಾನ್ಯ (ಅಧ್ಯಕ್ಷರು), ಎಸ್ಸಿ ಮಹಿಳೆ (ಉಪಾಧ್ಯಕ್ಷರು), ಉಚ್ಚಂಗಿದುರ್ಗ : ಎಸ್ಸಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ಚಟ್ನಿಹಳ್ಳಿ : ಎಸ್ಸಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ಪುಣಭಘಟ್ಟ : ಎಸ್ಸಿ (ಅದ್ಯಕ್ಷರು), ಸಾಮಾನ್ಯ ಮಹಿಳೆ (ಉಪಾಧ್ಯಕ್ಷರು).

ತೌಡೂರು : ಎಸ್ಟಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ಅಣಜಿಗೇರಿ : ಸಾಮಾನ್ಯ ಮಹಿಳೆ (ಅಧ್ಯಕ್ಷರು), ಎಸ್ಟಿ(ಉಪಾಧ್ಯಕ್ಷರು), ಅರಸಿಕೇರಿ : ಸಾಮಾನ್ಯ (ಅಧ್ಯಕ್ಷರು), ಎಸ್ಸಿ ಮಹಿಳೆ (ಉಪಾಧ್ಯಕ್ಷರು), ಶಿಂಗ್ರಿಹಳ್ಳಿ : ಎಸ್ಸಿ (ಅಧ್ಯಕ್ಷರು), ಸಾಮಾನ್ಯ ಮಹಿಳೆ (ಉಪಾಧ್ಯಕ್ಷರು). ಹೊಸಕೋಟೆ : ಸಾಮಾನ್ಯ (ಅಧ್ಯಕ್ಷರು), ಎಸ್ಸಿ ಮಹಿಳೆ (ಉಪಾಧ್ಯಕ್ಷರು), ಗುಂಡಗತ್ತಿ : ಎಸ್ಟಿ ಮಹಿಳೆ (ಅಧ್ಯಕ್ಷರು), ಸಾಮಾನ್ಯ (ಉಪಾಧ್ಯಕ್ಷರು), ಹಾರಕನಾಳು : ಸಾಮಾನ್ಯ(ಅಧ್ಯಕ್ಷರು), ಎಸ್ಟಿ ಮಹಿಳೆ (ಉಪಾಧ್ಯಕ್ಷರು).

ಒಟ್ಟು 37 ಗ್ರಾಮ ಪಂಚಾಯ್ತಿಗಳಲ್ಲಿ ಎಸ್ಸಿಗೆ - 11, ಇದರಲ್ಲಿ 6 ಮಹಿಳೆಯರಿಗೆ.

ಎಸ್ಟಿಗೆ - 7 ಇದರಲ್ಲಿ 4 ಮಹಿಳೆಯರಿಗೆ, ಸಾಮಾನ್ಯ - 19 ಇದರಲ್ಲಿ 9 ಮಹಿಳೆಯರಿಗೆ ಮೀಸಲು ಹೀಗೆ ಮೀಸಲಾತಿ ನಿಗದಿ ಪಡಿಸಲಾಗಿದೆ.

ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ, ತಾ.ಪಂ ಇಒ ಕೆ.ಆರ್.ಪ್ರಕಾಶ್, ಕಂದಾಯ ಸಿಬ್ಬಂದಿ ಅರವಿಂದ್, ಜಿಲ್ಲಾಧಿಕಾರಿಗಳ ಕಚೇರಿ ಸಿಬ್ಬಂದಿ ಹಾಜರಿದ್ದರು.

# ಪುಸ್ತಕ ನಮ್ಮಿಂದ ಎಂದಿಗೂ ದೂರ ಹೋಗದ ಉತ್ತಮ ಸ್ನೇಹಿತ

## ಧರಾಮ ಕಾಲೇಜ್‌ನಲ್ಲಿ ಕೇಂದ್ರ ಗ್ರಂಥಾಲಯದ ಸಹಾಯಕ ಗೋಪಾಲ್



ದಾವಣಗೆರೆ, ಜೂ.18- ಪುಸ್ತಕಗಳನ್ನು ಓದುವ ಅಭ್ಯಾಸ ನಮಗೆ ಜ್ಞಾನವನ್ನು ನೀಡುತ್ತದೆ. ನಮ್ಮ ಶಬ್ದಕೋಶವನ್ನು ಮತ್ತು ಆಲೋಚನಾ ಶಕ್ತಿಯನ್ನು ಹೆಚ್ಚಿಸುತ್ತದೆ. ನಾವು ಕಠಿಣ ಪರಿಸ್ಥಿತಿಗಳಲ್ಲಿದ್ದಾಗ ಪುಸ್ತಕಗಳು ನಮ್ಮ ಅತ್ಯುತ್ತಮ ಮಾರ್ಗದರ್ಶಿಯಾಗಿ ನಮಗೆ ಸಹಾಯ ಮಾಡುತ್ತವೆ ಎಂದು ನಗರ ಕೇಂದ್ರ ಗ್ರಂಥಾಲಯದ ಸಹಾಯಕ ಗೋಪಾಲ್ ಹೇಳಿದರು.

ನಗರದ ಧ.ರಾ.ಮ. ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದ್ದ 'ನಮ್ಮ ಜೀವನದಲ್ಲಿ ಪುಸ್ತಕಗಳ ಪ್ರಾಮುಖ್ಯತೆ' ಎಂಬ ವಿಷಯ ಕುರಿತು ಅವರು ಮಾತನಾಡಿದರು.

ಪ್ರತಿ ವಯೋಮಾನದ ಜನರಲ್ಲಿನ ಒತ್ತಡದ ಮಟ್ಟವನ್ನು ನಿವಾರಿಸಲು ಪುಸ್ತಕಗಳನ್ನು ಓದುವುದು ಉತ್ತಮ ಮಾರ್ಗವಾಗಿದೆ. ಪುಸ್ತಕಗಳು ಶತಮಾನಗಳಿಂದಲೂ ಇವೆ. ಪುಸ್ತಕ ನಮ್ಮಿಂದ ಎಂದಿಗೂ ದೂರ ಹೋಗದ ಉತ್ತಮ ಸ್ನೇಹಿತನಂತೆ, ಹಾಗಾಗಿ ನಮ್ಮ ಜೀವನದಲ್ಲಿ ಪುಸ್ತಕಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ ಎಂದು ಅವರು ಹೇಳಿದರು.

ಪ್ರಾಂಶುಪಾಲರಾದ ಡಾ. ವನಜಾ ಅಧ್ಯಕ್ಷತೆ ವಹಿಸಿದ್ದರು. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಶಿವಪ್ಪ ಹಾಗೂ ಹರೀಶ್ ಕುಮಾರ್, ರೂಪಶ್ರೀ, ರೋಹಿತ್, ರುದ್ರೇಶ್, ನಾಗರಾಜ್, ಹರೀಶ್, ರಮ್ಯಾ ಕುಮಾರಿ, ಮಂಜುನಾಥ್ ಚೆನ್ನಿ ಮತ್ತು ಎ. ಆರ್. ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನ ಮುಖ್ಯ ಗ್ರಂಥಪಾಲಕ ಡಾ. ಚಮನ್ ಸಾಬ್ ಉಪಸ್ಥಿತರಿದ್ದರು.

# ಪ್ರೀತಿ ಆರೈಕೆ - ಆರೋಗ್ಯ ಕಲರವ



ದಾವಣಗೆರೆ, ಜೂ. 18 - ನಗರದ ವಿವೇಕಾ ನಂದ ಬಡಾವ ಣೆಯ ಶ್ರೀ ಚಿಕ್ಕನಹಳ್ಳಿ ದೊಡ್ಡಪ್ಪ ಪ್ರೌಢ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವು ಅಪ್ಪಂದಿರ ದಿನ (ಜೂನ್ 18)ದಂದು ಅರ್ಥಪೂರ್ಣವಾಗಿ ನೆರವೇರಿತು.

ಶಿಬಿರದಲ್ಲಿ ಇತ್ತೀಚಿನ ದಿನಗಳಲ್ಲಿ ಪಿಡುಗಾಗಿ ಪರಿಣಮಿಸಿರುವ ರಕ್ತದೊತ್ತಡ, ಮಧುಮೇಹ, ಹೃದಯ ಸಂಬಂಧಿ ತೊಂದರೆಗಳ ಬಗ್ಗೆ ಶಿಬಿರದಲ್ಲಿ ತಪಾಸಣೆ ನಡೆಸಿ, ಸೂಕ್ತ ಚಿಕಿತ್ಸೆಯ ಬಗ್ಗೆ ತಿಳುವಳಿಕೆ ನೀಡಲಾಯಿತು. ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥ ಡಾ. ಟಿ.ಜಿ. ರವಿಕುಮಾರ್ ಅವರು ತಪಾಸಣೆಯ ನೇತೃತ್ವ ವಹಿಸಿದ್ದರು. ಮಾಜಿ ಶಾಸಕರೂ ಆದ ಪ್ರೀತಿ ಆರೈಕೆ ಟ್ರಸ್ಟ್ ಮತ್ತು ಆರೈಕೆ ಸಮೂಹ ಸಂಸ್ಥೆಗಳ ಅಧ್ಯಕ್ಷ ಟಿ. ಗುರುಸಿದ್ಧನಗೌಡ, ಡಾ. ಸುದರ್ಶನ್, ಸಂಜಯ್, ಸಂತೋಷ್ ಅರುಣ್, ವಿಶ್ವನಾಥ್, ಶಿವ ಶಂಕರ್, ವೀರಭದ್ರಪ್ಪ, ಶ್ರೀಮತಿ ವೀಣಾ ನಂಜಪ್ಪ ಸೇರಿದಂತೆ ಇತರರು ತಪಾಸಣೆ ಶಿಬಿರದಲ್ಲಿ ಭಾಗವಹಿಸಿದ್ದರು.

## ಅಪ್ಪಂದಿರ ದಿನವೇ ಮಕ್ಕಳ ಜೊತೆ ಬಾವಿಗೆ ಹಾರಿದ ತಂದೆ

ಚಿಂಚೋಳಿ, ಜೂ.18- ತಂದೆಯೊಬ್ಬ ತನ್ನ ಇಬ್ಬರು ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಬಾವಿಗೆ ಹಾರಿದ ಘಟನೆ ಅಪ್ಪಂದಿರ ದಿನವಾದ ಭಾನುವಾರವೇ ನಡೆದಿದೆ.

ಕಲಬುರಗಿ ಜಿಲ್ಲೆಯ ಗಡಿ ಗ್ರಾಮ ಕುಂಚಾವರಂ ಬಳಿ ಭಾನುವಾರ ನಡೆದಿರುವ ಈ ಘಟನೆಯಲ್ಲಿ ತಂದೆ ಹಾಗೂ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.


ಕುಂಚಾವರಂ ಗ್ರಾಮದ ಹಣಮಂತ ಸಂಜಪ್ಪ ವಡ್ಡರ್ (40) ಮಗ ಓಂಕಾರ (9) ಹಾಗೂ ಮಗಳು ಅಕ್ಷರ (6) ಮೃತ ದುರ್ದೈವಿಗಳು.

ಕುಂಚಾವರಂ ನಿವಾಸಿಯಾಗಿದ್ದ ಹಣಮಂತ ಕೆಲ ವರ್ಷಗಳ ಹಿಂದೆ ತೆಲಂಗಾಣದ ತಾಂಡೂರಿನಲ್ಲಿ ಮನೆ ಕಟ್ಟಿಕೊಂಡು ಅಲ್ಲಿಯೇ ನೆಲೆಸಿದ್ದನು. ಈಚೆಗೆ ಹೈದರಾಬಾದ್ ಗೆ ತೆರಳಿದ್ದ ಹಣಮಂತ ಮಕ್ಕಳೊಂದಿಗೆ ಕುಂಚಾವರಂಗೆ ಬಂದಿದ್ದಾರೆ.

ಶುಕ್ರವಾರ ತನ್ನ ಸಹೋದರ ಗ್ರಾ.ಪಂ. ಸದಸ್ಯ ಗೋಪಾಲ ಎಂಬುವವರಿಗೆ ಕರೆ ಮಾಡಿ, ನಾನು ಮಕ್ಕಳೊಂದಿಗೆ ಬಾವಿಗೆ ಬಿದ್ದು ಸಾಯುತ್ತಿದ್ದೇನೆ. ನನ್ನ ಶವ ತೆಗೆದು ಅಂತ್ಯಕ್ರಿಯೆ ನಡೆಸುವಂತೆ ಕೋರಿಕೊಂಡಿದ್ದಾನೆ. ಆಗ ಗೋಪಾಲನು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ.

ಕರ್ನಾಟಕ ಮತ್ತು ತೆಲಂಗಾಣ ಪೊಲೀಸರು, ಅಗ್ನಿಶಾಮಕ ಠಾಣೆಯವರು ಹುಡುಕಿದರೂ ಪತ್ತೆಯಾಗಿಲ್ಲ. ಭಾನುವಾರ ಕುಂಚಾವರಂ ಬಳಿಯ ಪೋಚಾವರಂ ಗ್ರಾಮದ ತೋಟದ ಬಾವಿಯಲ್ಲಿ ಮೂವರ ಶವಗಳು ಪತ್ತೆಯಾಗಿವೆ. ಘಟನೆಗೆ ಕಾರಣ ತಿಳಿದು ಬಂದಿಲ್ಲ. ಈ ಕುರಿತು ಕುಂಚಾವರಂ ಠಾಣೆಯ ಪೊಲೀಸರು ಸ್ಥಳಕ್ಕೆ ತೆರಳಿ ಶವ ಹೊರ ತೆಗೆದಿದ್ದಾರೆ.

# ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ : ಜನರಿಗೆ ಬದುಕುವ ಭರವಸೆ ; ಎಸ್ಸೆಸ್



ದಾವಣಗೆರೆ, ಜೂ.18- ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ರಾಜ್ಯದ ಜನತೆ ನೆಮ್ಮದಿಯ ಜೀವನ ನಡೆಸುವ ಭರವಸೆ ಸಿಕ್ಕಿದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬ್ಲಾಕ್ ಸಮಿತಿ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಈ ಹಿಂದಿನ ಸರ್ಕಾರದಲ್ಲಿ ಕೇವಲ ಜಾತಿ, ಧರ್ಮದ ವಿಷಯಗಳನ್ನು ಪ್ರಸ್ತಾಪಿಸಿ, ಜನರು ನೆಮ್ಮದಿ ಇಲ್ಲದಂತಿದ್ದರು. ಆದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಚುನಾವಣೆಗೂ ಮುನ್ನ ನೀಡಿದ್ದ ಭರವಸೆಗಳನ್ನು ಈಡೇರಿಸುವತ್ತ ಹೆಜ್ಜೆ ಹಾಕಿದ್ದು, ಇಂದು ರಾಜ್ಯದ ಜನ ನೆಮ್ಮದಿಯಿಂದ ಜೀವನ ನಡೆಸುವಂತಾಗಿದೆ ಎಂದು ಅವರು ಹೇಳಿದರು.

ಚುನಾವಣೆ ಪೂರ್ವದಲ್ಲಿ ಐದು ಪ್ರಮುಖ ಗ್ಯಾರಂಟಿಗಳನ್ನು ನೀಡಲಾಗಿತ್ತು. ಅದರಲ್ಲಿ ಈಗಾಗಲೇ ಒಂದು ಗ್ಯಾರಂಟಿ ಮಹಿಳೆಯರು ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸುವುದಕ್ಕೆ ಅನುಮತಿ ನೀಡಿದ್ದು, ಲಕ್ಷಾಂತರ ಹೆಣ್ಣುಮಕ್ಕಳಿಗೆ ಅನುಕೂಲವಾಗಿದೆ ಎಂದರು.

ಇನ್ನು ನಾಲ್ಕು ಗ್ಯಾರಂಟಿಗಳನ್ನು ಶೀಘ್ರದಲ್ಲೇ ಜಾರಿಗೆ ತರಲಾಗುವುದು. ಬಿಜೆಪಿಗರು ಜನರಲ್ಲಿ ಗೊಂದಲ ಮೂಡಿಸುತ್ತಿದ್ದು, ಜನತೆ ಬಿಜೆಪಿಗರ ಮಾತಿಗೆ ಕಿವಿಗೊಡಬೇಡಿ ಎಂದು ಕರೆ ನೀಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇದೆ ಎಂಬ ಕಾರಣಕ್ಕೆ ಕೇಂದ್ರ ಸರ್ಕಾರ ಅಕ್ಕಿ ನೀಡದೇ ವಂಚಿಸುತ್ತಿದ್ದು, ಇದಕ್ಕೆ ಮುಂದಿನ ದಿನಗಳಲ್ಲಿ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ ಪಕ್ಷ ಎಂದಿಗೂ ಜಾತಿ, ಧರ್ಮ ನೋಡಿ ಯೋಜನೆಗಳನ್ನು ರೂಪಿಸುವುದಿಲ್ಲ.

ನಮ್ಮದು ಜನರ ಸರ್ಕಾರ ಜನರಿಗಾಗಿ ಒಳಿತನ್ನೇ ಮಾಡುತ್ತೇವೆ ವಿನಃ ವಂಚನೆ ಮಾಡಲ್ಲ ಎಂದು ಮಾರ್ಮಿಕವಾಗಿ ನುಡಿದರು.

ಇದೇ ಸಂದರ್ಭದಲ್ಲಿ ಶಾಸಕ ಎಸ್ಸೆಸ್ ಅವರು 93ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಹಿನ್ನೆಲೆಯಲ್ಲಿ ಕೇಕ್ ಕತ್ತರಿಸಲಾಯಿತು. 93 ಸಾಧಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮವನ್ನುದ್ದೇಶಿಸಿ ತಂಜೀಂ ಕಮಿಟಿ ಮಾಜಿ ಅಧ್ಯಕ್ಷ ಸಾಧಿಕ್ ಪೈಲ್ವಾನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೊಡಪಾನ ದಾದಾಪೀರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಶುಭಮಂಗಳ ಮತ್ತಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಆನಂದಪ್ಪ ಎಸ್. ಎಲ್., ಮಹಾನಗರ ಪಾಲಿಕೆ ಸದಸ್ಯ ಎ.ಬಿ.ರಹೀಂ, ಬುತ್ತಿ ಗಫೂರ್ ಸಾಬ್, ಖಲಂದರ್, ಶ್ರೀಮತಿ ಗೀತಾ ಚಂದ್ರಶೇಖರ್, ರುದ್ರಮ್ಮ, ಭಾರತ್ ಕಾಲೋನಿ ಜಗದೀಶ್, ಸಾವನ್, ಪರಮೇಶ್, ನೀಲಗಿರಿಯಪ್ಪ, ದೋಣಿ ನಿಂಗಪ್ಪ, ಪೈಲ್ವಾನ್ ಹನುಮಂತಪ್ಪ, ಲಾಲ್ ಆರೀಫ್, ಅಲಿ ರೆಹಮತ್, ಹರೀಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಹೃದಯಪೂರ್ವಕ ಅಭಿನಂದನೆಗಳು

ರಾಷ್ಟ್ರಮಟ್ಟದ ಕಾಮೆಡ್-ಕೆ ಪರೀಕ್ಷೆಯಲ್ಲಿ ಶೇ. 99.57ರಷ್ಟು ಅಂಕ ಪಡೆದು, ರಾಜ್ಯದಲ್ಲಿ 349ನೇ ರ್‍ಯಾಂಕ್ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿರುವ 'ವಿಶ್ವಚೇತನ ವಿದ್ಯಾನಿಕೇತನ' ವಸತಿಯುತ ಪದವಿ ಪೂರ್ವ ಕಾಲೇಜಿನ

**ಕು|| ಎಸ್.ಎಂ. ತನೀಷಾ**



ಅವರಿಗೆ ಅಭಿನಂದಿಸುತ್ತಾ, ಅವರು ತಮ್ಮ ವಿದ್ಯಾಭ್ಯಾಸದಲ್ಲಿ ಇನ್ನೂ ಉನ್ನತ ಮಟ್ಟಕ್ಕೇರಲಿ ಎಂದು ಶುಭ ಹಾರೈಸುವವರು :

- ✦ ಮಾಗಾನಹಳ್ಳಿ ರವಿಶಂಕರ್
- ✦ ಮಾಗಾನಹಳ್ಳಿ ಶಂಕರ್ (ಬಾಬು)
- ✦ ಮಾಗಾನಹಳ್ಳಿ ಉಮಾಶಂಕರ್
- ✦ ಜಿ ಬಿ ನಟೇಶ್
- ✦ ಮುಂಡಾಸ್ ಶಿವರಾಜ್
- ✦ ಮುದ್ದಳ್ಳಿ ಸಂಜಯ್
- ✦ ಮುದ್ದಳ್ಳಿ ಅನುಪ್
- ✦ ಮುದ್ದಳ್ಳಿ ಸ್ವರೂಪ್
- ✦ ಮಾಗಾನಹಳ್ಳಿ ಗಿರೀಶ್
- ✦ ಮಾಗಾನಹಳ್ಳಿ ಗುರು
- ✦ ಕಣವಿ ಜೆ. ಸಂತೋಷ್
- ✦ ಮಾಗಾನಹಳ್ಳಿ ದಿನೇಶ್
- ✦ ಅಂದನೂರು ನವೀನ್, ರಾಣೆಬೆನ್ನೂರು

# ವರುಣನಿಗಾಗಿ ನಗರ ದೇವತೆ ದುಗ್ಗಮ್ಮನಿಗೆ ನಾಳೆ ಎಡೆ ಜಾತ್ರೆ




ದಾವಣಗೆರೆ, ಜೂ. 18 - ವರುಣ ದೇವನ ಕೃಪೆಗಾಗಿ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ನಾಡಿದ್ದು ದಿನಾಂಕ 20ರ ಮಂಗಳವಾರ ಎಡೆಜಾತ್ರೆ ಅರ್ಪಿಸಲಾಗುವುದು ಎಂದು ದೇವಸ್ಥಾನದ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

ಮಳೆ ಬಾರದೇ ರೈತರು ಬಿತ್ತನೆಗೆ ಪರಿತಪಿಸುತ್ತಿದ್ದು, ವ್ಯಾಪಾರಸ್ಥರು, ಸಾರ್ವಜನಿಕರು ಬಿಸಿಲಿನ ಬೇಗೆ ತಡೆಯಲಾರದೇ ಕಂಗಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ವರುಣ ದೇವನ ಕೃಪೆಗಾಗಿ ಎಡೆ ಜಾತ್ರೆ ನಡೆಸಲಾಗುತ್ತದೆ. ದೇವಸ್ಥಾನದ ಪುರೋಹಿತ ನಾಗರಾಜ್ ಜೋಯಿಸ್ ಮತ್ತು ಸಂಗಡಿಗರು ಎಡೆ ಜಾತ್ರೆಯನ್ನು ನಡೆಸಿಕೊಡುವರು.

ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಟ್ರಸ್ಟ್‌ನ ಸದಸ್ಯರ ಅಪೇಕ್ಷೆಯ ಮೇರೆಗೆ ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಂತೆ ಶ್ರೀ ಅಮ್ಮನವರ ಎಡೆ ಜಾತ್ರೆಗೆ ಏರ್ಪಾಡು ಮಾಡಲಾಗಿದೆ.

# ನಗರದಲ್ಲಿ ಇಂದು ಅಥಣಿ ಮುರುಘೇಂದ್ರ ಶಿವಯೋಗಿಗಳವರ ಜಯಂತ್ಯುತ್ಸವ



ಮಹಾಮಹಿಮರೂ, ತಪಸ್ವಿಗಳೂ ಆದ ಪರಮಪೂಜ್ಯ ಶ್ರೀಮದ್ ಅಥಣಿ ಮುರುಘೇಂದ್ರ ಶಿವಯೋಗಿಗಳವರ 188ನೇ ಜಯಂತ್ಯುತ್ಸವ ಕಾರ್ಯಕ್ರಮವು ಇಂದು ಸಂಜೆ 5 ಗಂಟೆಗೆ ಶ್ರೀ ಶಿವಯೋಗಾಶ್ರಮದಲ್ಲಿ ನಡೆಯಲಿದೆ. ಶ್ರೀ ಶಿವಯೋಗೀಶ್ವರ ಸಾಂಸ್ಕೃತಿಕ ಭಜನಾ ಸಂಘದ ವತಿಯಿಂದ ಏರ್ಪಾಡಾಗಿರುವ ಈ ಕಾರ್ಯಕ್ರಮದ ಸಾನ್ನಿಧ್ಯವನ್ನು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಲಿದ್ದಾರೆ. ಅಂದು ಉಭಯ ಗದ್ದುಗೆಯಲ್ಲಿ ವಚನಾಭಿಷೇಕ, 6.30 ರಿಂದ ಸಾಮೂಹಿಕ ಭಜನೆ, ಶ್ರೀಗಳಿಂದ ಆಶೀರ್ವಚನ ಸರಳವಾಗಿ ನಡೆಯಲಿದೆ.

# ಪೆಟ್ರೋಲ್, ಡೀಸೆಲ್ ಬೇಡಿಕೆಯಲ್ಲಿ ಇಳಿಕೆ

ನವದೆಹಲಿ, ಜೂ. 18 – ಮುಂಗಾರಿನ ಆಗಮನದಿಂದಾಗಿ ಜೂನ್ ತಿಂಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟ ಕಡಿಮೆಯಾಗಿದೆ. ಕೃಷಿ ವಲಯದಿಂದ ಬೇಡಿಕೆ ಕಡಿಮೆಯಾಗಿರುವುದು ಹಾಗೂ ವಾಹನ ಸಂಚಾರ ಕಡಿಮೆಯಾಗಿರುವುದರಿಂದ ಈ ಬೆಳವಣಿಗೆಯಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಜೂನ್ 1-15ರ ಅವಧಿಯಲ್ಲಿ ಡೀಸೆಲ್ ಬೇಡಿಕೆ ಶೇ.6.7ರಷ್ಟು ಕಡಿಮೆಯಾಗಿ 3.43 ದಶಲಕ್ಷ ಟನ್‌ಗಳಿಗೆ ಇಳಿದಿದೆ. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಡೀಸೆಲ್ ಬೇಡಿಕೆ ಕ್ರಮವಾಗಿ ಶೇ.6.7 ಹಾಗೂ ಶೇ.9.3ರಷ್ಟು ಏರಿಕೆಯಾಗಿತ್ತು. ಜೂನ್ ತಿಂಗಳಲ್ಲಿ ಪೆಟ್ರೋಲ್ ಮಾರಾಟ ಶೇ.5.7ರಷ್ಟು ಕಡಿಮೆಯಾಗಿ 1.3 ದಶಲಕ್ಷ ಟನ್‌ಗಳಿಗೆ ಸೀಮಿತವಾಗಿದೆ.

# ಜೆಇಇ-ಅಡ್ವಾನ್ಸ್‌ಡ್ ಫಲಿತಾಂಶ ಪ್ರಕಟ

ನವದೆಹಲಿ ಜೂ. 18 – ಐ.ಐ.ಟಿ.ಗಳ ಪ್ರವೇಶಕ್ಕಾಗಿ ನಡೆಸಲಾಗುವ ಜೆಇಇ -ಅಡ್ವಾನ್ಸ್‌ಡ್ ಪರೀಕ್ಷೆಯ ಫಲಿತಾಶ ಪ್ರಕಟವಾಗಿದೆ. ಐಐಟಿ ಹೈದರಾಬಾದ್ ವಲಯದಿಂದ ಅತಿ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ.

ನಂತರದ ಸ್ಥಾನದಲ್ಲಿ ಐಐಟಿ ದೆಹಲಿ ವಲಯ ಹಾಗೂ ಐಐಟಿ ಬಾಂಬೆ ವಲಯಗಳಿವೆ. ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆಗೆ 1,80,372 ಅಭ್ಯರ್ಥಿಗಳು ಹಾಜರಾಗಿದ್ದರು. ಈ ಪೈಕಿ 43,773 ಅಭ್ಯರ್ಥಿಗಳು ಅರ್ಹತೆ ಪಡೆದುಕೊಂಡಿದ್ದಾರೆ. ಇವರಲ್ಲಿ 36,204 ವಿದ್ಯಾರ್ಥಿಗಳು ಹಾಗೂ 7,509 ವಿದ್ಯಾರ್ಥಿನಿಯರಿದ್ದಾರೆ. ದೇಶಾದ್ಯಂತ ಇರುವ ಐಐಟಿ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕಾಗಿ ಈ ಪರೀಕ್ಷೆ ನಡೆಸಲಾಗಿತ್ತು. ಜೂನ್ 4ರಂದು ಪರೀಕ್ಷೆ ನಡೆದಿತ್ತು. ಸೋಮವಾರದಿಂದ ಸೀಟುಗಳಿಗಾಗಿ ಕೌನ್ಸೆಲಿಂಗ್ ಆರಂಭವಾಗಲಿದೆ.



# ಜಿಲ್ಲಾದ್ಯಂತ ಜು.8ರಂದು ರಾಷ್ಟ್ರೀಯ ಲೋಕ್ ಅದಾಲತ್

## ಜಿಲ್ಲೆಯಲ್ಲಿ ಇಲ್ಲಿವರೆಗೆ 35,787 ಪ್ರಕರಣಗಳು ಬಾಕಿ: ನ್ಯಾ. ರಾಜೇಶ್ವರಿ ಎನ್. ಹೆಗಡೆ

ದಾವಣಗೆರೆ, ಜೂ. 18 - ಬರುವ ಜುಲೈ 8ರಂದು ರಾಷ್ಟ್ರೀಯ ಲೋಕ್ ಅದಾಲತ್ತನ್ನು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಿನ್ನೆಯವರೆಗೆ ಜಿಲ್ಲೆಯಲ್ಲಿ 35,787 ಪ್ರಕರಣಗಳು ಬಾಕಿ ಇವೆ. ಇವುಗಳಲ್ಲಿ ಸುಮಾರು 30 ಸಾವಿರ ಪ್ರಕರಣಗಳಲ್ಲಿ ರಾಜಿ ಸಾಧ್ಯವಿದೆ. ಈ ಪ್ರಕರಣಗಳಿಗಾಗಿ ಲೋಕ್ ಅದಾಲತ್ ಆಯೋಜಿಸಲಾಗುತ್ತಿದೆ ಎಂದರು.

ಲೋಕ್ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯಪೂರ್ವ ಪ್ರಕರಣಗಳನ್ನು ಉಚಿತವಾಗಿ ಮತ್ತು ಶೀಘ್ರವಾಗಿ ಬಗೆಹರಿಸಿಕೊಳ್ಳಬಹುದು. ಗಂಭೀರ ಪ್ರಕರಣಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು ಲೋಕ್ ಅದಾಲತ್ ವ್ಯಾಪ್ತಿಗೆ ಬರುತ್ತವೆ ಎಂದು ನ್ಯಾಯಮೂರ್ತಿ ಹೇಳಿದರು.

ಹೆಚ್ಚಿನ ಮಾಹಿತಿಗಳಿಗಾಗಿ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ದೂ : 08192 296364), ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ - 08192 296885, ಹೊನ್ನಾಳಿ - 08188 251732, ಚನ್ನಗಿರಿ - 08189 229195 ಹಾಗೂ ಜಗಳೂರು - 08196 227600 ಸಂಪರ್ಕಿಸಬಹುದು ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಅರುಣ್, ಲೋಕ್ ಅದಾಲತ್ ಬಡವರಿಗೆ ಸಹಾಯಕವಾಗಿದೆ. ಪರಿಹಾರ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದೆ ಎಂದರು.


ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಸಾಮಾಜಿಕ ಸಾಮರಸ್ಯಕ್ಕೆ ಲೋಕ್ ಅದಾಲತ್ ಉಪಯುಕ್ತವಾಗಿದೆ. ಈ ದಿಸೆಯಲ್ಲಿ ನ್ಯಾಯಾಲ ಯದ ಜೊತೆ ವಕೀಲರ ಸಂಘ ಸಹಕಾರ ನೀಡಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹಿರಿಯ ಸಿವಿಲ್ ನ್ಯಾಯಮೂರ್ತಿಯೂ ಆಗಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರೆಣ್ಣವರ, ಜಿಲ್ಲಾ ನ್ಯಾಯಾಲಯದ ಸಿಇಒ ಶ್ರೀನಿವಾಸ್, ವಕೀಲರ ಸಂಘದ ಕಾರ್ಯದರ್ಶಿ ಎಸ್. ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

### ಲೋಕ್ ಅದಾಲತ್‌ಗೆ ಬರುವ ಪ್ರಕರಣಗಳು

**ರಾಜೀಯಾಗಬಲ್ಲ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟಾರ್ ವಾಹನ ಅಪಘಾತ ಪರಿಹಾರ, ಚೆಕ್ ಅಮಾನ್ಯ, ಭೂಸ್ವಾಧೀನ, ಬ್ಯಾಂಕ್ ಸಾಲ, ಎಂ.ಎಂ.ಡಿ.ಆರ್. ಕಾಯ್ದೆಯ ಪ್ರಕರಣಗಳು, ವಿಚ್ಛೇದನ ಹೊರತಾದ ಕೌಟುಂಬಿಕ ನ್ಯಾಯಾಲಯ ಪ್ರಕರಣಗಳು, ಪಿಂಚಣಿ, ವೇತನ ಭತ್ಯೆ, ವಿದ್ಯುತ್, ನೀರಿನ ಶುಲ್ಕ ಕೈಗಾರಿಕಾ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಇತ್ಯಾದಿ ಪ್ರಕರಣಗಳನ್ನು ಲೋಕ್ ಅದಾಲತ್ ನಲ್ಲಿ ಬಗೆಹರಿಸಿಕೊಳ್ಳಬಹುದು.**

# ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ರಾಜಶೇಖರ್



ಹರಪನಹಳ್ಳಿ, ಜೂ. 18- ಪಟ್ಟಣದ ಟಿ.ಎಂ.ಎ.ಇ ಸಂಸ್ಥೆಯ ಕಟ್ಟಿ ಸೇತುರಾಮಾಚಾರಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಟಿ.ಎಂ. ರಾಜಶೇಖರ್ ಅವರನ್ನು ಬಳ್ಳಾರಿ ಜಿಲ್ಲೆ ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನಾಗಿ ನೇಮಕ ಮಾಡಿ ಕುಲಸಚಿವ ಎಸ್.ಸಿ. ಪಾಟೀಲ್ ಆದೇಶಿಸಿದ್ದಾರೆ.

ಜೂನ್ 15ರಿಂದ ಒಂದು ವರ್ಷ ಅಥವಾ ಮುಂದಿನ ಆದೇಶದವರೆಗೂ ಸಿಂಡಿಕೇಟ್ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಟಿ.ಎಂ. ರಾಜಶೇಖರ್ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾಗಿರುವುದಕ್ಕೆ ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷ ಷ.ಬ್ರ.ಶ್ರೀ ವರಸದ್ಯೋಜಾತ ಶಿವಚಾರ್ಯ ಮಹಾಸ್ವಾಮಿಜೀ, ಕಾರ್ಯದರ್ಶಿ ಟಿ.ಎಂ.ಚಂದ್ರಶೇಖರಯ್ಯ ಮತ್ತು ಕಾಲೇಜಿನ ಉಪನ್ಯಾಸಕರು ಹಾಗೂ ಆಡಳಿತ ಮಂಡಳಿಯವರು ಶುಭ ಹಾರೈಸಿದ್ದಾರೆ.

# ಗಾಣಿಗ ಸಮಾಜದ ಮಹಿಳಾ ಘಟಕದಿಂದ ಪುರಸ್ಕಾರ



ದಾವಣಗೆರೆ, ಜೂ. 18- ಜಿಲ್ಲಾ ಮಹಿಳಾ ಗಾಣಿಗರ ಸಮಾಜದ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿತ್ತು. ಅತಿಥಿಗಳಾಗಿ ಬಿಜಾಪುರದ ಶ್ರೀಮತಿ ಮೀನಾಕ್ಷಿ ಹುಟ್ಟಿಗಿ ಮತ್ತು ಹಿರಿಯೂರಿನ ಶ್ರೀಮತಿ ಶಶಿಕಲಾ ರವಿಶಂಕರ್ ಉಪಸ್ಥಿತರಿದ್ದರು. ಶ್ರೀಮತಿ ಪ್ರಭಾ ಜಯದೇವಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಮಾಜದ ಗುರುಗಳಾದ ಬಸವ ಕುಮಾರಸ್ವಾಮಿಗಳು, ಸಮಾಜದ ಗೌರವ ಅಧ್ಯಕ್ಷ ಡಾ.ಜಿ.ಸಿ. ಬಸವರಾಜ್, ನಿಕಟ ಪೂರ್ವ ಅಧ್ಯಕ್ಷ ಡಿ.ಎಸ್. ಬಸವರಾಜಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಮೀನಾಕ್ಷಿ ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

# ದಾವಣಗೆರೆ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನ



(1ನೇ ಪುಟದಿಂದ) ಮಾತನಾಡಿ, ಯೋಗ ಒಕ್ಕೂಟದ ದಶಮಾನೋತ್ಸವದ ಹಿನ್ನೆಲೆಯಲ್ಲಿ 2024ರ ವಿಶ್ವ ಯೋಗ ದಿನಾಚರಣೆಯ ರಾಜ್ಯ ಮಟ್ಟದ ಕಾರ್ಯಕ್ರಮವನ್ನು ದಾವಣಗೆರೆಯಲ್ಲಿಯೇ ಆಯೋಜಿಸಲು ಜಿಲ್ಲಾ ಉಸ್ತುವಾರಿ ಸಚಿವರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ದೇವಸ್ಥಾನ ಸಮಿತಿಯ ಗೌರವಾಧ್ಯಕ್ಷ ಆರ್.ಜಿ.ನಾಗೇಂದ್ರ ಪ್ರಕಾಶ್ ಪ್ರಾಸ್ತಾವಿಕ ಮಾತನಾಡಿ, ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಅಭಿವೃದ್ಧಿಗೆ ಮೊದಲಿನಿಂದಲೂ ಸಹಕರಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಪಕ್ಕದ ಜಾಗ ಕೊಡಿಸಲು ಸಹಕರಿಸಬೇಕು ಎಂದು ಮನವಿ ಮಾಡಿದರು. ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್, ಪಾಲಿಕೆ ಸದಸ್ಯೆ ಆಶಾ ಉಮೇಶ್, ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ವೀರಭದ್ರಪ್ಪ, ನಾಗಭೂಷಣ್ ಕಡೇಕೊಪ್ಪ, ಡಾ.ಯು. ಸಿದ್ದೇಶ್, ಡಾ. ಶಂಕರಗೌಡ, ತಾತಾ ವೆಂಕಟಾಚಲಪತಿ, ಜನತಾವಾಣಿ ಉಪ ಸಂಪಾದಕ ಇ.ಎಂ. ಮಂಜುನಾಥ ಉಪಸ್ಥಿತರಿದ್ದರು.

### ಮುಂದಿನ ವರ್ಷ ದಾವಣಗೆರೆಯಲ್ಲಿ ರಾಜ್ಯಮಟ್ಟದ ಯೋಗ ದಿನಾಚರಣೆ

ಮುಂದಿನ ವರ್ಷ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದಾವಣಗೆರೆಗೆ ಕರೆಯಿಸಿ, ರಾಜ್ಯ ಮಟ್ಟದ ಯೋಗ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸೋಣ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು. ಬರಲಿರುವ ಜೂ.21ರಂದು ನಡೆಯುವ ಯೋಗ ದಿನಾಚರಣೆಗೆ ಸಕಲ ಸಿದ್ಧತೆ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಅಂದೇ ಎಲ್ಲಾ ಸಚಿವರಿಗೆ ದಿಲ್ಲಿಯಲ್ಲಿ ಎಐಸಿಸಿಯಿಂದ ಸನ್ಮಾನ ಇರುವುದರಿಂದ ನಾವು ಕಾರ್ಯಕ್ರಮದಲ್ಲಿ ಭಾಗವಹಿಸಲಾಗುತ್ತಿಲ್ಲ ಎಂದರು.

# ಕ್ರೀಡಾ ಪ್ರೋತ್ಸಾಹ ಧನಕ್ಕಾಗಿ ಅರ್ಜಿ

ದಾವಣಗೆರೆ, ಜೂ.18- ಪ್ರತಿಭಾವಂತ ಮಾಧ್ಯಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.10,000 ದಂತೆ ಕ್ರೀಡಾ ವಿದ್ಯಾರ್ಥಿ ವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

6ನೇ ರಿಂದ 10ನೇ ತರ ಗತಿಯ ಅರ್ಹ ಕ್ರೀಡಾಪಟು ಗಳು ಅಧಿಕೃತ ಜಾಲ ತಾಣ : https:// seva-sin HYPERLINK "http:// dhuservices.karnataka. gov.in/" \t "_blank"dhuservices.karnataka.gov.in ಮೂಲಕ ಜುಲೈ 31ರ ಒಳಗಾಗಿ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ದೂ.08192-237480 ಸಂಪರ್ಕಿಸಬಹುದೆಂದು ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ನಿರ್ದೇಶಕ ರಾದ ಸುಚೇತನ ನೆಲವಿಗಿ ತಿಳಿಸಿದ್ದಾರೆ.


ssims SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಮಂಗಳವಾರ, 20ನೇ ಜೂನ್ 2023 | ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


# ಪುಣ್ಯಸ್ಮರಣೆ



**ದಿ|| ಮಾಳಿಗೇರ ಕುರುವತ್ತೆಪ್ಪನವರು**

ಜಮೀನ್ದಾರರು, ಎಲೇಬೇತೂರು

ಮರಣ : 19–06–1994

29ನೇ ಪುಣ್ಯಸ್ಮರಣೆ

**ದಿ|| ಮಾಳಿಗೇರ ನಾಗಮ್ಮ ಕುರುವತ್ತೆಪ್ಪನವರು**

ಮರಣ : 03–09–2012

11ನೇ ಪುಣ್ಯಸ್ಮರಣೆ

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು
ಎಂಬ ಕಲ್ಪನೆಯೊಂದಿಗೆ
ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ–ಮನಗಳಲ್ಲಿ
ದೀಪ ಮುಡಿಸಿ, ಶಿಸ್ತು–ಸಂಸ್ಕೃತಿ–ಸಂಸ್ಕಾರ ಕಲಿಸಿದ್ದೀರಿ.
ನಮಗೆ ನೀಡಿದ ಮಮಕಾರ, ಪ್ರೀತಿ–ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ

ಮಾಳಿಗೇರ ಬಸವರಾಜಪ್ಪ ಮತ್ತು ಸಹೋದರರು, ಸಹೋದರಿಯರು,
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು,
ಹಾಗೂ ಮಾಳಿಗೇರ ವಂಶಸ್ಥರು.

ನ್ಯೂ ನಂದಿ ಲಾಡ್ಜ್, ಶ್ರೀ ನಂದಿ ಲಾಡ್ಜ್
ಕೆ.ಆರ್. ರಸ್ತೆ, ದಾವಣಗೆರೆ.